# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



## ಮೇ ೧ನೇ ವಾರ

27-04-2026 TO 02-06-2026

# ಭಾರತ-ನ್ಯೂಜಿಲೆಂಡ್ ಎಫ್ಟಿಎಗೆ ಇಂದು ಸಹಿ

- ಶಿಕ್ಷಣ ಹಕ್ಕು ಕಾಯ್ದೆ
- ಗ್ರೇಟ್ ನಿಕೋಬಾರ್ ಯೋಜನೆ
- ಒಪೆಕ್ ತೊರೆಯಲು ಯುಎಇ ತೀರ್ಮಾನ
- ಲಡಾಖ್: 5 ಹೊಸ ಜಿಲ್ಲೆಗಳ ರಚನೆಗೆ ಒಪ್ಪಿಗೆ

## ❖ ಗಡಿ ಗುರುತಿಸಿ, ಚುನಾಯಿತ ಸದಸ್ಯರ ಸಂಖ್ಯೆ ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ: 8 ಜಿಲ್ಲೆಗಳ ಜಿ.ಪಂ. ಕ್ಷೇತ್ರಗಳ ಪುನರ್ ವಿಂಗಡಣೆ

- ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ಹಾಸನ, ಉತ್ತರ ಕನ್ನಡ, ಯಾದಗಿರಿ, ಬೀದರ್, ಕೊಪ್ಪಳ ಈ ಎಂಟು ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿ ಗುರುತಿಸಿ ಮತ್ತು ಚುನಾಯಿತ ಸದಸ್ಯರ ಸಂಖ್ಯೆ ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.
- ಈ ಹಿಂದೆ ಜಿಲ್ಲಾ ಪಂಚಾಯಿತಿಗಳ ಸದಸ್ಯರ ಸಂಖ್ಯೆ ಮತ್ತು ಗಡಿ ಗುರುತಿಸಿ ಹೊರಡಿಸಿದ್ದ ಅಧಿಸೂಚನೆಯ ನಂತರ ಆಗಿರುವ ಕೆಲವು ಆಡಳಿತಾತ್ಮಕ ಬದಲಾವಣೆಗಳ ಕಾರಣಕ್ಕೆ ಮತ್ತು ನಗರಾಭಿವೃದ್ಧಿ ಇಲಾಖೆಯು ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತಿಸಿರುವುದರಿಂದ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲಾಗಿದೆ.
- ಕಂದಾಯ ಇಲಾಖೆಯು ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳ ಭೌಗೋಳಿಕ ಗಡಿಗಳನ್ನು ಪುನರ್ ರಚಿಸಿತ್ತು. ಈ ಕಾರಣಗಳಿಂದಾಗಿ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿಗಳನ್ನು ಮತ್ತೊಮ್ಮೆ ಪರಿಷ್ಕರಿಸುವುದು ಅನಿವಾರ್ಯವಾಗಿತ್ತು.
- ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಗಡಿಗಳನ್ನು ಮರುನಿಗದಿಪಡಿಸಲಾಗಿದೆ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಕ್ರಮಸಂಖ್ಯೆಯ ನಿರಂತರತೆ ಕಾಪಾಡುವ ಉದ್ದೇಶದಿಂದ ಹಳೆಯ ಅಧಿಸೂಚನೆಗಳನ್ನು ಹಿಂಪಡೆದು ಹೊಸ ಕ್ರಮಸಂಖ್ಯೆಗೆ ಜೊಂದಿಗೆ ಕ್ಷೇತ್ರಗಳ ಹೆಸರು ಮತ್ತು ವ್ಯಾಪ್ತಿ ಪ್ರಕಟಿಸಲಾಗಿದೆ.
- ಪ್ರತಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಅಡಿಯಲ್ಲಿ ಬರುವ ಗ್ರಾಮಗಳ ವಿವರವಾದ ಪಟ್ಟಿಯನ್ನು ಅಧಿಸೂಚನೆ ಯಲ್ಲಿ ಪ್ರಕಟಿಸಲಾಗಿದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 28 ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗ ಳನ್ನು ಗುರುತಿಸಲಾಗಿದೆ. ಇದರಲ್ಲಿ ಹೊಸಕೋಟೆ (8), ದೇವನಹಳ್ಳಿ (7), ದೊಡ್ಡಬಳ್ಳಾಪುರ (7) ಮತ್ತು ನೆಲಮಂಗಲ (6) ಕ್ಷೇತ್ರಗಳಿವೆ.

## ❖ ಹೇಮಂತ್‌ಗೆ ಬೆಳ್ಳಿ

- ಭಾರತದ ಹೇಮಂತ್ ಬರ್ಮನ್ ಅವರು ಇಲ್ಲಿ ಭಾನುವಾರ ಮುಕ್ತಾಯಗೊಂಡ ಐಎಸ್‌ಎಸ್‌ಎಫ್ ಜೂನಿಯರ್ ಶೂಟಿಂಗ್ ವಿಶ್ವಕಪ್ನ ಪುರುಷರ 50 ಮೀ ರೈಫಲ್ ಶ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದರು. ಜುಹೇರ್ ಖಾನ್- ಆದ್ಯಾ ಕತ್ಯಾಳ್ ಜೋಡಿ ಟ್ರ್ಯಾಪ್ ಮಿಶ್ರ ತಂಡ ವಿಭಾಗದಲ್ಲಿ ರಜತ ಜಯಿಸಿತು.
- ಒಟ್ಟು 16 ಪದಕಗಳನ್ನು (5 ಚಿನ್ನ. 6 ಬೆಳ್ಳಿ. 5 ಕಂಚು) ಜಯಿಸಿದ ಭಾರತ ತಂಡವು ಪದಕಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ ನಗೆ ಬೀರಿತು.
- ಪುರುಷರ 50 ಮೀ ರೈಫಲ್ ಶ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಕಜಾಕಸ್ತಾನದ ಒಲೆಗ್ ನ್ಯೂಸ್ಕೋಪ್ (355.6 ಅಂಕ) ವಿಶ್ವದಾಖಲೆಯೊಂದಿಗೆ ಸ್ವರ್ಣ ಜಯಿಸಿದರು

## ❖ ಹೆಚ್ಚಿದ ತಾಪ: ವಿದ್ಯುತ್ ಬೇಡಿಕೆ 256 ಗಿಗಾವಾಟ್‌ಗೆ ಏರಿಕೆ

- ಹೆಚ್ಚಿನ ಬಿಸಿಗಾಳಿಯಿಂದ ದೇಶದಲ್ಲಿ ಹವಾನಿಯಂತ್ರಕಗಳು, ಕೂಲರ್‌ಗಳ ಬಳಕೆ ಹೆಚ್ಚಿದ ಇದರಿಂದ ಏಪ್ರಿಲ್ 25ರಂದು (ಶನಿವಾರ) ದೇಶದಲ್ಲಿ ವಿದ್ಯುತ್ ಬೇಡಿಕೆ 256.11 ಗಿಗಾವಾಟ್‌ಗೆ ಏರಿಕೆಯಾಗಿದೆ. ಇದು ಈವರೆಗಿನ ಗರಿಷ್ಠ ಮಟ್ಟದ ವಿದ್ಯುತ್ ಬೇಡಿಕೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯದ ಅಂಕಿ-ಅಂಶಗಳು ತಿಳಿಸಿವೆ.

Dr. Rajkumar IAS/KAS Academy

- ಏಪ್ರಿಲ್ 24ರಂದು (ಶುಕ್ರವಾರ) 252.07 ಗಿಗಾವಾಟ್ ವಿದ್ಯುತ್ ಬೇಡಿಕೆ ಇತ್ತು. ಈ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ 270 ಗಿಗಾವಾಟ್ಗೆ ತಲುಪಲಿದೆ ಎಂದು ಸಚಿವಾಲಯ ಅಂದಾಜಿಸಿದೆ.

## ❖ ಭಾರತ-ನ್ಯೂಜಿಲೆಂಡ್ ಎಫ್ಟಿಎಗೆ ಇಂದು ಸಹಿ

- ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್ಟಿಎ) ಸೋಮವಾರ (ಏಪ್ರಿಲ್ 27ರಂದು) ಸಹಿ ಬೀಳಲಿದೆ.
- ಕಳೆದ ವರ್ಷದ ಡಿಸೆಂಬರ್ 22ರಂದು ಎರಡೂ ರಾಷ್ಟ್ರಗಳ ನಡುವೆ ವ್ಯಾಪಾರ ಒಪ್ಪಂದದ ಕುರಿತ ಮಾತುಕತೆಗಳು ಅಂತಿಮಗೊಂಡಿದವು ಇದೀಗ ನಾಲ್ಕು ತಿಂಗಳ ಬಳಿಕ ಒಪ್ಪಂದಕ್ಕೆ ಸಹಿ ಆಗುತ್ತಿದೆ.
- ಈ ಒಪ್ಪಂದದಿಂದ ಭಾರತದ ಬಹುತೇಕ ಸರಕುಗಳು ಸುಂಕವಿಲ್ಲದೆ, ನ್ಯೂಜಿಲೆಂಡ್ ಗೆ ಪ್ರವೇಶಿಸಲಿವ. ಜೊತೆಗೆ, ಮುಂದಿನ 15 ವರ್ಷದಲ್ಲಿ ನ್ಯೂಜಿಲೆಂಡ್ ಭಾರತದಲ್ಲಿನ ತಯಾರಿಕ ಸೇವೆ, ನಾವೀನ್ಯ ಮತ್ತು ಉದ್ಯೋಗ ಸೃಷ್ಟಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ 20 ಬಿಲಿಯನ್ ಡಾಲರ್ (₹1.88 ಲಕ್ಷ ಕೋಟಿ) ಹೂಡಿಕೆ ಮಾಡಲು ನಿರ್ಧರಿಸಿದೆ.
- ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್ ಉಪಸ್ಥಿತಿಯಲ್ಲಿ 'ಭಾರತ ಮಂಟಪ'ದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

## ❖ 56 ಗಿಗಾವಾಟ್ ವಿದ್ಯುತ್ ಉತ್ಪಾದನೆ; ಪ್ರಧಾನಿ ನರೇಂದ್ರ ಮೋದಿ ವಿಶ್ಲೇಷಣೆ: 'ದೇಶದ ಅಭಿವೃದ್ಧಿಗೆ ಪವನ, ಸೌರಶಕ್ತಿ ಅಗತ್ಯ'

- 'ಸೌರ ಹಾಗೂ ಪವನ ವಿದ್ಯುತ್ ದೇಶದ ಅಭಿವೃದ್ಧಿಗೆ ಅಗತ್ಯವಾಗಿದೆ. ಇದು ಕೇವಲ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಮಾತ್ರವಲ್ಲದೆ ದೇಶದ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.
- ತಿಂಗಳ 'ಮನದ ಮಾತು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಪ್ರತಿಯೊಬ್ಬರು ಕೂಡ ವಿದ್ಯುತ್ ಉಳಿಸಲು ಆದ್ಯತೆ ನೀಡುವ ಜೊತೆಗೆ ಶುದ್ಧ ಇಂಧನ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು' ಎಂದು ಹೇಳಿದ್ದಾರೆ.
- 'ಪವನಶಕ್ತಿಯಲ್ಲಿ ದೊಡ್ಡ ಯಶಸ್ಸು ಸಾಧಿಸಿದ್ದೇವೆ ಕಳೆದ ವರ್ಷಾಂತ್ಯಕ್ಕೆ ದೇಶದಲ್ಲಿ 56 ಗಿಗಾವಾಟ್ ಪವನಶಕ್ತಿ ಉತ್ಪಾದನೆಯಾಗಿದ್ದರೆ, ಈಗ 6 ಮೆಗಾವಾಟ್ ಹೆಚ್ಚುವರಿಯಾಗಿ ಸೇರ್ಪಡೆಯಾಗಿದೆ. ಪವನಶಕ್ತಿ ಉತ್ಪಾದನೆಯಲ್ಲಿ ಜಾಗತಿಕವಾಗಿ ಭಾರತವು ನಾಲ್ಕನೇ ಸ್ಥಾನದಲ್ಲಿದೆ. ಹೆಚ್ಚುವರಿಯಾಗಿ 28 ಗಿಗಾವಾಟ್ ಪವನಶಕ್ತಿ ಉತ್ಪಾದನೆಯೂ ನಿರ್ಮಾಣ ಹಂತದಲ್ಲಿದೆ' ಎಂದು ವಿವರಿಸಿದ್ದಾರೆ.
- 'ಸುಮಾರು ಶೇಕಡ 45ರಷ್ಟು ವಿದ್ಯುತ್ ಹೆಚ್ಚು ಬೇಡಿಕೆ ಇರುವ ಸಮಯದಲ್ಲಿಯೇ ಉತ್ಪಾದನೆಯಾಗುತ್ತಿದೆ' ಎಂದು ಹೇಳಿದ್ದಾರೆ.
- ಬಿದಿರಿನ ಉತ್ಪನ್ನ ಬಳಸಿ: ಈಶಾನ್ಯ ರಾಜ್ಯಗಳಿಂದ ಕನಿಷ್ಠ ಒಂದು ಬಿದಿರಿನ ಉತ್ಪನ್ನವನ್ನು ಖರೀದಿಸುವಂತೆ ಸಲಹೆ ನೀಡಿದ ಪ್ರಧಾನಿ, ಇದರಿಂದ ಅವರ ಶ್ರಮಕ್ಕೆ ಪ್ರೋತ್ಸಾಹ ನೀಡಿ ದಂತಾಗುತ್ತದೆ ಎಂದು ತಿಳಿಸಿದ್ದಾರೆ.
- 'ಬಿದಿರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯುವುದು ಕಷ್ಟ ಇದರಿಂದ ಈ ಉದ್ದಿಮಯಿಂದ ದೂರ ಸರಿಯಲು ಯತ್ನಿಸಿದರು. 2017ರಲ್ಲಿ ಬಿದಿರನ್ನು ಮರದ ವರ್ಗದಿಂದ ತೆಗೆದು ಹುಲ್ಲು ಎಂದು ಪರಿಗಣಿಸಲಾಯಿತು. ಇದರಿಂದ ಈಶಾನ್ಯ ರಾಜ್ಯದಾದ್ಯಂತ ಉದ್ಯಮವು ಮತ್ತೆ ಚೇತರಿಸಿಕೊಂಡಿದೆ' ಎಂದು ತಿಳಿಸಿದ್ದಾರೆ.

Dr. Rajkumar ASK Academy

## ❖ ಲಡಾಖ್: 5 ಹೊಸ ಜಿಲ್ಲೆಗಳ ರಚನೆಗೆ ಒಪ್ಪಿಗೆ

- ಕೇಂದ್ರಾಡಳಿತ ಪ್ರದೇಶ ಲಡಾಖ್ನಲ್ಲಿ ಐದು ಹೊಸ ಜಿಲ್ಲೆಗಳ ರಚನೆಗೆ ಲಡಾಖ್ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರು ಒಪ್ಪಿಗೆ ನೀಡಿದ್ದಾರೆ. ಇದರೊಂದಿಗೆ ಈ ಪ್ರದೇಶದ ಜನರ ಬಹುಕಾಲದ ಆಕಾಂಕ್ಷೆ ಈಡೇರಿದಂತಾಗಿದೆ.
- 'ಲಡಾಖ್ನಲ್ಲಿ ಐದು ಹೊಸ ಜಿಲ್ಲೆಗಳ ರಚನೆಗೆ ಸಂಬಂಧಿಸಿದ ಅಧಿಸೂಚನೆಗೆ ನಾನು ಒಪ್ಪಿಗೆ ನೀಡಿದ್ದೇನೆ, ಲಡಾಖ್ ಜನರ ದೀರ್ಘ ಕಾಲದ ಬೇಡಿಕೆಯನ್ನು ಈಡೇರಿಸಿದ್ದೇನೆ. ಲಡಾಖ್ನ ಜನರಿಗೆ ಇದು ಐತಿಹಾಸಿಕ ದಿನ' ಎಂದು ಸಕ್ಸೇನಾ ಅವರು 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.
- ನುಬ್ರಾ, ಶಾಮ್, ಚಾಂಗ್ಥಾಂಗ್, ಜಾಂಸ್ಕರ್ ಮತ್ತು ದ್ರಾಸ್- ಈ ಐದು ಹೊಸ ಜಿಲ್ಲೆಗಳ ರಚನೆಯೊಂದಿಗೆ ಲಡಾಖ್ ನ ಒಟ್ಟು ಜಿಲ್ಲೆಗಳ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ ಎಂದು ಅವರು ಹೇಳಿದ್ದಾರೆ. ಈ ಮೊದಲು ಲಡಾಖ್ನಲ್ಲಿ ಎರಡು ಜಿಲ್ಲೆಗಳು (ಲೇಹ್ ಹಾಗೂ ಕಾರ್ಗಿಲ್) ಮಾತ್ರ ಇದ್ದವು.
- 'ಐದು ಹೊಸ ಜಿಲ್ಲೆಗಳ ರಚನೆಯು ಆಡಳಿತವನ್ನು ಜನರ ಹತ್ತಿರ ತರುವುದರ ಜೊತೆಗೆ ಅಭಿವೃದ್ಧಿ, ಉದ್ಯೋಗಾವಕಾಶ ಮತ್ತು ಉದ್ಯಮ ಶೀಲತೆಗೆ ಹೊಸ ಮಾರ್ಗಗಳನ್ನು ಸೃಷ್ಟಿಸಲಿದೆ' ಎಂದು ಸಕ್ಸೇನಾ ಅವರು ಹೇಳಿದ್ದಾರೆ.

## ❖ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ: ಸರ್ಕಾರಿ ಶಾಲೆಗಳ ಬಲವರ್ಧನೆಗೆ ಎಂಟು 'ಗ್ಯಾರಂಟಿ'

- ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳು ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಬಲವರ್ಧನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಂಟು ಗ್ಯಾರಂಟಿಗಳನ್ನು ಘೋಷಿಸಿದ್ದಾರೆ.
- ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಶಿಕ್ಷಕರನ್ನು ತ್ವರಿತ ನೇಮಕಾತಿ ಮಾಡುವ ಮೂಲಕ ಶಿಕ್ಷಕರ ಕೊರತೆ ನೀಗಿಸುವುದು. ಪ್ರತಿ ಶಾಲೆಗೂ ಸುಸಜ್ಜಿತ ಕಟ್ಟಡ, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಕೊಠಡಿಗಳು, ಕುಡಿಯುವ ನೀರು, ಶೌಚಾಲಯಗಳ ನಿರ್ಮಾಣ. ಮಕ್ಕಳು ಹಾಗೂ ಪೋಷಕರ ಇಚ್ಛೆಗೆ ಅನುಗುಣವಾಗಿ ಭಾಷಾ ಮಾಧ್ಯಮ ಆಯ್ಕೆ. ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸುತ್ತಲ ಗ್ರಾಮ, ವಾರ್ಡ್ಗಳಿಂದ ಬರುವ ಮಕ್ಕಳಿಗೆ ಉಚಿತ ಸಾರಿಗೆ ವ್ಯವಸ್ಥೆ ಪ್ರತಿ ಶಾಲೆಗಳಲ್ಲೂ ಆಧುನಿಕ ಶಿಕ್ಷಣಕ್ಕೆ ಅನುಗುಣವಾಗಿ ಡಿಜಿಟಲ್ ಕಲಿಕೆಗೆ ಅವಕಾಶ, ಸ್ಮಾರ್ಟ್ ಕ್ಲಾಸ್ಗಳ ನಿರ್ಮಾಣ. ವಿವಿಧ ಕಲೆಗಳು, ಕ್ರೀಡಾ ಚಟುವಟಿಕೆಗಳಿಗೆ ಆದ್ಯತೆ ಪ್ರತಿ ಶಾಲೆಯಲ್ಲೂ ಶೈಕ್ಷಣಿಕ ಗುಣಮಟ್ಟದ ಮೇಲ್ವಿಚಾರಣೆಗೆ ಪ್ರತ್ಯೇಕ ಸಮಿತಿ ರಚನೆ ಭವಿಷ್ಯದಲ್ಲಿ ಉದ್ಯೋಗ ಸಿಗುವಂತಹ ಶಿಕ್ಷಣ ಕಲಿಕೆಗೆ ಅವಕಾಶ ನೀಡಲು ಶಾಲಾ ಹಂತದಿಂದಲೇ ಮಕ್ಕಳಿಗೆ ಕೌಶಲಾಧಾರಿತ ತರಬೇತಿಯ ಭರವಸೆ ನೀಡಿದ್ದಾರೆ.
- ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, 'ಎಸ್ಎಸ್ಎಲ್ಸಿ, ಪಿಯು ದಾಖಲೆಯ ಫಲಿತಾಂಶ ಹರ್ಷ ತಂದಿದೆ. ಎಸ್ಎಸ್ಎಲ್ಸಿಯಲ್ಲಿ ಶೇ 94 1 ಹಾಗೂ ಪಿಯುನಲ್ಲಿ ಶೇ 86.48 ಫಲಿತಾಂಶ ನೀಡುವ ಮೂಲಕ ಮಕ್ಕಳು ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ಅದರಲ್ಲೂ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಸಾಧನೆ ಬೆರಗು ಮೂಡಿಸಿದೆ. ಈ ಸಾಧನೆಗಳು ನಮ್ಮ ಸರ್ಕಾರಿ ಶಾಲಾ ವ್ಯವಸ್ಥೆಯ ಬಲವನ್ನು ತೋರಿಸುತ್ತವೆ ಇದರಿಂದ ಪ್ರೇರಿತನಾಗಿ ಎಂಟು ಅಂಶಗಳ ಕಾರ್ಯಕ್ರಮವನ್ನು ನೀಡುತ್ತಿದ್ದೇನೆ. ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುತ್ತೇನೆ' ಎಂದಿದ್ದಾರೆ
- `ಸರ್ಕಾರಿ ಶಾಲೆಗಳ ಬಲರ್ಧನೆಗೆ ಕೈಗೊಳ್ಳಲಿರುವ ಸುಧಾರಣೆಗಳು 50 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಪ್ರಯೋಜನಕಾರಿಯಾಗಲಿವೆ. ಈ ಎಲ್ಲ ಬದಲಾವಣೆಗಳು 2025-27ನೇ ಸಾಲಿನಿಂದಲೇ ಆರಂಭವಾಗಲಿವೆ. ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲೇ ಅತ್ಯುತ್ತಮ ಸರ್ಕಾರಿ ಶಾಲಾ ವ್ಯವಸ್ಥೆಯನ್ನು ನಿರ್ಮಿಸುವುದು ಸರ್ಕಾರದ ಗುರಿಯಾಗಿದೆ ಪೋಷಕರು ಮತ್ತು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆಯುವ ಮೂಲಕ ಈ ಪರಿವರ್ತನಾ ಪ್ರಯಾಣದ ಭಾಗವಾಗಬೇಕು' ಎಂದು ಕರೆ ನೀಡಿದ್ದಾರೆ.

Dr. Rajkumar IAS/KAS Academy

## ❖ ಭಾರತ, ನ್ಯೂಜಿಲೆಂಡ್ ಎಫ್ಟಿಎ ಅಂಕಿತ: ವರ್ಷದ ಅಂತ್ಯದ ವೇಳೆಗೆ ಅನುಷ್ಠಾನಕ್ಕೆ ಬರುವ ನಿರೀಕ್ಷೆ

- ದ್ವಿಪಕ್ಷೀಯ ವಾಣಿಜ್ಯ ವಹಿವಾಟು ಹಾಗೂ ಹೂಡಿಕೆ ಯನ್ನು ಐದು ವರ್ಷಗಳಲ್ಲಿ ದುಪ್ಪಟ್ಟು ಮಾಡುವ ಗುರಿ ಹೊಂದಿರುವ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್ಟಿಎ) ಭಾರತ ಮತ್ತು ನ್ಯೂಜಿಲೆಂಡ್ ಸೋಮವಾರ ಸಹಿ ಹಾಕಿವೆ. ಈ ಒಪ್ಪಂದವು 'ತಲೆಮಾರಿಗೆ ಒಂದು ಬಾರಿ ಮಾತ್ರ ಸಾಧ್ಯವಾಗು ವಂಥದ್ದು' ಎಂದು ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಬಣ್ಣಿಸಿದ್ದಾರೆ.
- ಒಪ್ಪಂದಕ್ಕೆ ನ್ಯೂಜಿಲೆಂಡ್ನ ಸಂಸತ್ತು ಒಪ್ಪಿಗೆ ನೀಡಬೇಕಿದೆ. ಹೀಗಾಗಿ ಇದು ಈ ವರ್ಷದ ಅಂತ್ಯದ ಹೊತ್ತಿಗೆ ಅನುಷ್ಠಾನಕ್ಕೆ ಬರುವ ನಿರೀಕ್ಷೆ ಇದೆ.
- ಒಪ್ಪಂದದ ಭಾಗವಾಗಿ ಭಾರತಕ್ಕೆ ನ್ಯೂಜಿಲೆಂಡ್ನಿಂದ 20 ಬಿಲಿಯನ್ ಅಮೆರಿಕನ್ ಡಾಲರ್ (ಇಂದಿನ ಮೌಲ್ಯದ ಅನ್ವಯ ಅಂದಾಜು ₹1.88 ಲಕ್ಷ ಕೋಟಿ) ನೇರ ಹೂಡಿಕೆ ಹರಿದುಬರಲಿದೆ.
- ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹಾಗೂ ನ್ಯೂಜಿಲೆಂಡ್ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮಕ್ಕ ಅವರು ಒಪ್ಪಂದಕ್ಕೆ ಸಹಿ ಹಾಕಿದರು.
- ಭಾರತದಿಂದ ನ್ಯೂಜಿಲೆಂಡ್ ಗೆ ರಫ್ತಾಗುವ ಎಲ್ಲ ಉತ್ಪನ್ನಗಳಿಗೆಈ ಒಪ್ಪಂದದ ಪರಿಣಾಮವಾಗಿ ಸುಂಕರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲು ಸಾಧ್ಯವಾಗಲಿದೆ. ಇದರಿಂದಾಗಿ ಭಾರತದ ಎಂಎಸ್ಎಂಇ ವಲಯದ ಉದ್ದಿಮೆಗಳಿಗೆ ಗಣನೀಯ ಪ್ರಯೋಜನ ಆಗುವ ನಿರೀಕ್ಷೆ ಇದೆ.
- ಕಾರ್ಮಿಕರ ಅಗತ್ಯ ಹೆಚ್ಚಿನ ಪ್ರಮಾಣದಲ್ಲಿ ಇರುವ ಭಾರತದ ಜವಳಿ, ಸಿದ್ದ ಉಡುಪು, ಚರ್ಮೋತ್ಪನ್ನಗಳು, ಪಾದರಕ್ಷೆ, ಹವಳ ಮತ್ತು ಆಭರಣ, ಎಂಜಿನಿಯರಿಂಗ್ ಉತ್ಪನ್ನಗಳು ಹಾಗೂ ಸಂಸ್ಕರಿಸಿದ ಆಹಾರ ಉತ್ಪನ್ನಗಳು ನ್ಯೂಜಿಲೆಂಡ್ನ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕ ಆಗುವ ನಿರೀಕ್ಷೆ ಕೂಡ ಇದೆ
- ಈ ಮೊದಲು ನ್ಯೂಜಿಲೆಂಡ್ನಲ್ಲಿ ಭಾರತದ ಸೆರಾಮಿಕ್ ಉತ್ಪನ್ನಗಳಿಗೆ ನೆಲಹಾಸುಗಳಿಗೆ, ವಾಹನಗಳಿಗೆ ಹಾಗೂ ವಾಹನ ಬಿಡಿಭಾಗಗಳಿಗೆ ಶೇ 10ರವರೆಗೆ ತೆರಿಗೆ ಇತ್ತು.
- ಭಾರತದ ತಯಾರಿಕಾ ವಲಯಕ್ಕೆ ಅಗತ್ಯವಿರುವ ಮರದ ದಿಮ್ಮಿಗಳು, ಕಿಟ್ಟಿಯುಕ್ತ ಕಲ್ಲಿದ್ದಲು, ಲೋಹದ ತ್ಯಾಜ್ಯ ಸುಂಕರಹಿತವಾಗಿ ನ್ಯೂಜಿಲೆಂಡ್ನಿಂದ ಬರಲಿವೆ ಇದರಿಂದಾಗಿ ಭಾರತದಲ್ಲಿ ಕೆಲವು ಉತ್ಪನ್ನಗಳ ತಯಾರಿಕಾ ವೆಚ್ಚವು ಕಡಿಮೆ ಆಗಲಿದೆ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ ಮರ ಕುರಿಮಾಂಸ ಕೂಡ ಸುಂಕರಹಿತವಾಗಿ ಆಮದಾಗಲಿವೆ.
- ನ್ಯೂಜಿಲೆಂಡ್ನಿಂದ ಆಮದು ಆಗುವ ಶೇ 29.97ರಷ್ಟು ಉತ್ಪನ್ನ ಗಳಿಗೆ ತೆರಿಗೆ ವಿನಾಯಿತಿಯ ಸೌಲಭ್ಯ ಇರುವುದಿಲ್ಲ ಭಾರತದ ಸೂಕ್ಷ್ಮ ವಲಯಗಳ ಹಿತ ಕಾಯುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ. ನ್ಯೂಜಿಲೆಂಡ್ನ ಶೇ 70ರಮ್ಮ ಉತ್ಪನ್ನಗಳ ವಿಚಾರದಲ್ಲಿ ಭಾರತವು ಸುಂಕ ಉದಾರೀಕರಣದ ನೀತಿ ಅನುಸರಿಸಲಿದೆ.
- ಕೆಲವು ಉತ್ಪನ್ನಗಳ ಮೇಲಿನ ಸುಂಕವನ್ನು ಭಾರತವು ಹಂತ ಹಂತವಾಗಿ ತಗ್ಗಿಸಲಿದೆ ನ್ಯೂಜಿಲೆಂಡ್ ವೈನ್, ಔಷಧ, ಪಾಲಿಮರ್. ಅಲ್ಯುಮಿನಿಯಂ. ಕಬ್ಬಿಣ ಮತ್ತು ಉಕ್ಕಿನ ವಸ್ತುಗಳಿಗೆ ತೆರಿಗೆ ಕಡಿಮೆ ಆಗಲಿದೆ. ಸೇಬು, ಕಿವಿ ಹಣ್ಣುಗಳು ಸೇರಿದಂತೆ ಕೆಲವು ಉತ್ಪನ್ನಗಳಿಗೆ ಕೋಟಾ ಆಧಾರಿತ ಸುಂಕ ವಿನಾಯಿತಿ ಸೌಲಭ್ಯ ಇರಲಿದೆ.
- ಎಫ್ಟಿಎ ಭಾಗವಾಗಿ ಹೊಸ ಬಗೆಯ ತಾತ್ಕಾಲಿಕ ನೌಕರಿ ವೀಸಾ ಪಡೆಯುವ ಅವಕಾಶವು ಭಾರತದ ವೃತ್ತಿಪರರಿಗೆ ಸಿಗಲಿದೆ ಆಯುಷ್ ವೈದ್ಯರು, ಯೋಗ ತರಬೇತುದಾರರು ಬಾಣಸಿಗರು, ಸಂಗೀತ ಕಲಿಸುವವರು, ಐ.ಟಿ. ವೃತ್ತಿಪರರು, ಎಂಜಿನಿಯರಿಂಗ್, ಆರೋಗ್ಯಸೇವೆ, ಶಿಕ್ಷಣ ಮತ್ತು ನಿರ್ಮಾಣ ವಲಯದ ವೃತ್ತಿಪರರು ಇದರ ಪ್ರಯೋಜನ ಪಡೆಯಬಹುದು.

Dr. Rajkumar IAS/KAS Academy

## ರೈತರು, ಯುವಕರಿಗೆ ಅನುಕೂಲ: ಮೋದಿ

- ಮುಕ್ತ ವ್ಯಾಪಾರ ಒಪ್ಪಂದವು ದೇಶದ ರೈತರು, ಯುವಕರು, ಮಹಿಳೆಯರು, ಎಂಎಸ್‌ಎಂಇ ವಲಯ. ಕುಶಲಕರ್ಮಿಗಳು, ನವೋದ್ಯಮಗಳು, ವಿದ್ಯಾರ್ಥಿ ಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.
- 'ನ್ಯೂಜಿಲೆಂಡ್ನಿಂದ ಹೂಡಿಕೆಯ ಭರವಸೆ ಸಿಕ್ಕಿರುವುದು ಕೃಷಿ, ತಯಾರಿಕೆ, ಆವಿಷ್ಕಾರ ಮತ್ತು ತಂತ್ರಜ್ಞಾನ ವಲಯಗಳಲ್ಲಿ ನಮ್ಮ ಸಹಕಾರವನ್ನು ಬಲಪಡಿಸಲಿದೆ' ಎಂದಿದ್ದಾರೆ.

## ❖ ಮುಖ್ಯಮಂತ್ರಿ, ಪ್ರಧಾನಿ ಪದಚ್ಯುತಿ ಮಸೂದೆ: ಜೆಪಿಸಿ ಸಭೆ

- ಕ್ರಿಮಿನಲ್ ಆರೋಪ ಹೊತ್ತ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳನ್ನು ಪದಚ್ಯುತಗೊಳಿಸುವ ಮಸೂದೆ ಪರಿಶೀಲಿಸುತ್ತಿರುವಅಪರಾಜಿತಾ ಸಾರಂಗಿ ಸಾರಥ್ಯದ ಜಂಟಿ ಸದನ ಸಮಿತಿಯು (ಜೆಪಿಸಿ) ಮಹಾ ರಾಷ್ಟ್ರದಲ್ಲಿ ಅಭಿಪ್ರಾಯ ಸಂಗ್ರಹಿಸಿತು.
- ಮಹಾರಾಷ್ಟ್ರ ಸರ್ಕಾರ ದೊಂದಿಗೆ ಚರ್ಚಿಸಿದ ಸಾರಂಗಿ ಅವರು, 'ಪ್ರಸ್ತಾವಿತ ಶಾಸನವು ಭಾರತದ ಪ್ರಜಾಪ್ರಭುತ್ವದ ಚೌಕಟ್ಟನ್ನು ಬಲಪಡಿಸುವಲ್ಲಿ ಒಂದು ಮೈಲಿಗಲ್ಲು' ಎಂದು ಹೇಳಿದರು.
- ಸಂವಿಧಾನ (130ನೇ ತಿದ್ದುಪಡಿ) ಮಸೂದೆ- 2025, ಪ್ರಧಾನಿ, ಮುಖ್ಯಮಂತ್ರಿ ಹಾಗೂ ಸಚಿವರು ಐದು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಅವಧಿ ಜೈಲು ಶಿಕ್ಷೆಗೆ ಗುರಿಯಾಗುವ ಅಪರಾಧಕ್ಕೆ ಸಂಬಂಧಿಸಿದಂತೆ ಸತತ 30 ದಿನ ಬಂಧನದಲ್ಲಿದ್ದರೆ ಪದಚ್ಯುತಗೊಳ್ಳಲಿದ್ದಾರೆ.
- ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಸಮಿತಿಗೆ ಮೂರು ಪ್ರಮುಖ ಸಲಹೆ ನೀಡಿದ್ದಾರೆ ಅವನ್ನು ಪರಿಶೀಲಿಸಲಾಗುವುದು ಎಂದು ಸಾರಂಗಿ ತಿಳಿಸಿದರು.
- ಮಹಾರಾಷ್ಟ್ರ ಸರ್ಕಾರ ರಾಜಕೀಯ ಪಕ್ಷಗಳು ಅಧಿಕಾರಿಗಳು, ಮಾನವ ಹಕ್ಕುಗಳ ಆಯೋಗ ಹಾಗೂ ವಿವಿಧ ಸಂಘಟನೆಗಳ ಜೊತೆ ಸಮಿತಿಯು ಮುಂಬೈನಲ್ಲಿ ಸಭೆ ನಡೆಸಿ ಚರ್ಚಿಸಿತು.
- ಜೆಪಿಸಿ ಎಲ್ಲರಿಂದಲೂ ಸಲಹೆ ಆಲಿಸುತ್ತಿದೆ ಇವನ್ನು ಕ್ರೋಢೀಕರಿಸಿ, ವಿಶ್ಲೇಷಣೆಗೊಳಪಡಿಸಿದ ನಂತರ ಸಮಗ್ರ ವರದಿಯೊಂದನ್ನು ಸಿದ್ಧಗೊಳಿಸಿ ಲೋಕಸಭಾ ಸ್ಪೀಕರ್ ಒಂಬಿರ್ಲಾ ಅವರಿಗೆ ಸಲ್ಲಿಸಲಿದೆ ಎಂದು ಅಪರಾಜಿತಾ ಹೇಳಿದರು.

## ❖ ಮ್ಯಾರಥಾನ್: ಕೆನ್ಯಾದ ಸಾವೆ ವಿಶ್ವದಾಖಲೆ

- ಕನ್ಯಾದ ದೂರ ಅಂತರದ ಓಟಗಾರ ಸಬಾಸ್ಟಿಯನ್ ಸಾವ ಅವರು ಪುರುಷರ ಮ್ಯಾರಥಾನ್ ಸ್ಪರ್ಧೆಯಲ್ಲಿ ಎರಡು ಗಂಟೆಯೊಳಗೆ ಗುರಿ ತಲುಪಿ ವಿಶ್ವದಾಖಲೆ ಬರೆದರು ಇಥಿಯೋಪಿಯಾದ ಟಿಸ್ಟ ಅಸಫಾ ಅವರು ಮಹಿಳೆಯರ ವಿಭಾಗದಲ್ಲಿ ತಮ್ಮದೇ ವಿಶ್ವದಾಖಲೆಯನ್ನು ಉತ್ತಮ ಪಡಿಸಿಕೊಂಡರು.
- ಹಾಲಿ ಚಾಂಪಿಯನ್ ಸಾವೆ ಅವರು 42.195 ಕಿಲೋ ಮೀಟರ್ ದೂರವನ್ನು 1 ಗಂಟೆ 59 ನಿಮಿಷ 30 ಸೆಕೆಂಡುಗಳಲ್ಲಿ ಕ್ರಮಿಸಿದರು. ಈ ಸ್ಪರ್ಧೆಯಲ್ಲಿ ಎರಡು ಗಂಟೆಗಳಿಗೂ ಮೊದಲು ಗುರಿ ಮುಟ್ಟಿದ ಮೊದಲ ಅಥ್ಲೆಟ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.
- ಸ್ಪರ್ಧೆಯಲ್ಲಿ 31 ವರ್ಷದ ಸಾವೆ ಅವರಿಗೆ ಇಥಿಯೋಪಿಯಾದ ಯೋಮಿಫ್ ಕಜಿಲ್ಲಾ (1:59:41) ಮತ್ತು ಉಗಾಂಡಾದ ಜೇಕಬ್ ಕಿಪ್ಲೋಮ (200 28) ಅವರಿಂದ ಪ್ರಬಲ ಪೈಪೋಟಿ ಎದುರಾಯಿತು ಅವರಿಬ್ಬರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.
- ಈ ಮೂವರೂ ಹಿಂದಿನ ವಿಶ್ವದಾಖಲೆಯ ಸಮಯಕ್ಕಿಂತ ಬೇಗ ಗುರಿ ತಲುಪಿದ್ದು ವಿಶೇಷವಾಗಿತ್ತು 2023ರ ಷಿಕಾಗೊ ಮ್ಯಾರಥಾನ್ನಲ್ಲಿ ಕೆನ್ಯಾದ ಕೆಲಿನ್ ಕಿಪ್ತುಮ್ (200 35) ವಿಶ್ವದಾಖಲೆ ನಿರ್ಮಿಸಿದ್ದರು. 24 ವರ್ಷದ ಕಲ್ಪಿನ್ 2024ರಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ
- ಮಹಿಳೆಯರ ಓಟದಲ್ಲಿ ಹಾಲಿ ಒಲಿಂಪಿಕ್ ಅಸಫಾ 2 ಗಂಟೆ 15 ನಿಮಿಷ 41 ಸೆಕೆಂಡ್ಗಳಲ್ಲಿ ಗುರಿ ತಲುಪಿದರು 29 ವರ್ಷದ ಓಟಗಾರ್ತಿ 2025ರ ಲಂಡನ್ ಮ್ಯಾರಥಾನ್ನಲ್ಲಿ (2:15:50) ವಿಶ್ವದಾಖಲೆ ನಿರ್ಮಿಸಿದ್ದರು.

Dr. Rajkumar IAS/KAS Academy

## ❖ ಹೊಸ ಪಾತ್ರದಲ್ಲಿ ಪಯಣ ಆರಂಭಿಸಿದ ಸಿಂಧು

- ಸಕ್ರಿಯ ಆಟಗಾರ್ತಿ ಯಾಗಿರುವ ಪಿ.ವಿ.ಸಿಂಧು ಅವರು ಈಗ ಮತ್ತೊಂದು ಪಾತ್ರವನ್ನೂ ವಹಿಸುತ್ತಿದ್ದಾರೆ ಈಗ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಆಡಳಿತ ಸಮಿತಿ ಸದಸ್ಯೆಯೂ ಆಗಿರುವ ಅವರು 'ವಿಶ್ವದಾದ್ಯಂತ ಶಟ್ಲರ್‌ಗಳ ಧ್ವನಿಗೆ ಪ್ರತಿನಿಧಿಯಾಗುವುದಾಗಿ' ಭರವಸೆ ನೀಡಿದ್ದಾರೆ.
- ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಪದಕ ಗೆದ್ದಿರುವ ಸಿಂಧು ಅವರು ಬಿಡಬ್ಲ್ಯುಎಫ್ ಕೌನ್ಸಿಲ್‌ನಲ್ಲಿ ಮತದಾನದ ಹಕ್ಕನ್ನೂ ಹೊಂದಿದ್ದಾರೆ. ಅವರು 2025ರ ಡಿಸೆಂಬರ್‌ನಲ್ಲಿ ಬಿಡಬ್ಲ್ಯುಎಫ್ ಅಸ್ಲೀಟ್ಸ್ ಕಮಿಷನ್ ಮುಖ್ಯಸ್ಥೆ ಆಗಿ ಆಯ್ಕೆಯಾಗಿದ್ದರು.
- ಅವರು ಬಿಡಬ್ಲ್ಯುಎಫ್‌ನ ವಾರ್ಷಿಕ ಸಭೆಯಲ್ಲಿ ಮೊದಲ ಬಾರಿ ಭಾಗವಹಿಸುವ ಮೂಲಕ ತಮ್ಮ ಅಧಿಕಾರಾವಧಿಯನ್ನು ಔಪಚಾರಿಕವಾಗಿ ಆರಂಭಿಸಿದರು ಆಟಗಾರ್ತಿಯೊಬ್ಬರು ಸಕ್ರಿಯವಾಗಿರು ವಾಗಲೇ ಆಡಳಿತದಲ್ಲಿ ಭಾಗಿಯಾಗಿರುವ ವಿರಳ ಅವಕಾಶ ಸಿಂಧು ಅವರಿಗೆ ಒಲಿದಿದೆ ಅವರು ಆಡಳಿತ ಮಂಡಳಿಯಲ್ಲಿ ಆಟಗಾರರ ಅಹವಾಲುಗಳಿಗೆ ಧ್ವನಿಯಾಗುವ ಜೊತೆಗೆ ಮತಾಧಿಕಾರದ ಹಕ್ಕನ್ನೂ ಹೊಂದಿದ್ದಾರೆ.

## ❖ ವಿಶ್ವ ಬ್ಯಾಲಿ: ಮಸ್ಕರೇನಾಸ್-ಗಗನ್ ಜೋಡಿಗೆ 48ನೇ ಸ್ಥಾನ

ಕರ್ನಾಟಕದ ಜೋಡಿ ಡೀನ್ ಮಸ್ಕರೇನಾಸ್ ಮತ್ತು ಗಗನ್ ಕರುಂಬಯ್ಯ ಅವರು ಸ್ಪೇನ್ ಕೆನರಿ ದ್ವೀಪದಲ್ಲಿ ನಡೆದ ವಿಶ್ವ ಬ್ಯಾಲಿ ಚಾಂಪಿಯನ್‌ಷಿಪ್‌ನ ಕ್ಲಾಸ್-3 ಸ್ಪರ್ಧೆಯಲ್ಲಿ ಭಾನುವಾರ 7 ಸ್ಥಾನದೊಂದಿಗೆ ರೇಸ್ ಪೂರ್ಣಗೊಳಿಸಿದರು.

ಮಂಗಳೂರಿನ ಮಸ್ಕರೇನಾಸ್ ಅವರು ಚಾಲಕರಾಗಿ ಹಾಗೂ ಕೊಡಗಿನ ಗಗನ್ ಅವರು ಇದೇ ಮೊದಲ ಬಾರಿಗೆ ವಿಶ್ವ ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿದಿದ್ದರು ಈ ಜೋಡಿಯು ಯುರೋಪ್ ಮೂಲದ 'ಪಿಎಚ್ ಸ್ಪೋರ್ಟ್ಸ್' ಸಂಸ್ಥೆ ಸಿದ್ಧಪಡಿಸಿದ ಫೋರ್ಡ್ ಫಿಯಸ್ತಾ ರಾಲಿ-3 ಕಾರನ್ನು ಚಲಾಯಿಸಿತು ರಾಲಿಯಲ್ಲಿ ಒಟ್ಟಾರೆ 48ನೇ ಸ್ಥಾನ ಪಡೆಯಿತು.

ಟಿಎಸ್‌ಐ ರೇಸಿಂಗ್‌ನ ಮಸ್ಕರೇನಾಸ್ ಅವರು ನರೇನ್‌ಕುಮಾರ್ ಹಾಗೂ ಗೌರವ್ ಗಿಲ್ ಅವರ ಬಳಿಕ ಈ ಪ್ರತಿಷ್ಠಿತ ರಾಲಿಯಲ್ಲಿ ಭಾಗವಹಿಸಿದ ಭಾರತದ ಮೂರನೇ ಚಾಲಕ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ

## ❖ ಡಿಜಿಟಲ್ ಅರೆಸ್ಟ್ ವಿರುದ್ಧ ಕ್ರಮ: ಸುಪ್ರೀಂ ಕೋರ್ಟಿಗೆ ಮಾಹಿತಿ ನೀಡಿದ ಕೇಂದ್ರ: ಡಿಜಿಟಲ್ ಅರೆಸ್ಟ್: 9,400 ವಾಟ್ಸ್ ಆಪ್ ಖಾತೆ ಸ್ಥಗಿತ

- 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ನಡೆದಿದ್ದ ಆನ್‌ಲೈನ್ ವಂಚನೆ ಪ್ರಕರಣಗಳಲ್ಲಿ ಭಾಗಿ ಯಾಗಿದ್ದ 9,400 ಖಾತೆಗಳನ್ನು ವಾಟ್ಸ್ ಅಪ್ ಸ್ಥಗಿತಗೊಳಿಸಿದೆಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.
- ಇದರ ಜೊತೆಗೆ ದೂರಸಂಪರ್ಕ ನಿಯಂತ್ರಕರು, ಸೇವಾ ಪೂರೈಕೆದಾರರು, ಆರ್‌ಬಿಐ, ಟೆಕ್ ಸಂಸ್ಥೆಗಳು, ಸಿಬಿಐ ಸಹ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಪ್ರಕರಣಗಳಿಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳುತ್ತಿವೆ ಎಂದು ತಿಳಿಸಿದ.
- ದೇಶದಲ್ಲಿ ನಡೆಯುತ್ತಿರುವ ಡಿಜಿಟಲ್ ವಂಚನೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಫೆಬ್ರುವರಿ 9ರಂದು ನಿರ್ದೇಶನ ನೀಡಿತ್ತು. ಈ ಬೆನ್ನಲ್ಲೇ, ಕೇಂದ್ರ ಗೃಹ ಸಚಿವಾಲಯದ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರವು ಈ ಕುರಿತು ಸಮಗ್ರವಾದ ಮಾಹಿತಿಯನ್ನು ಒಳಗೊಂಡ ಸ್ಥಿತಿಗತಿ ವರದಿಯನ್ನು ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.
- 'ಡಿಜಿಟಲ್ ಅರೆಸ್ಟ್' ಸೇರಿದಂತೆ ಆನ್‌ಲೈನ್ ವಂಚನೆಗಳ ಬಗ್ಗೆ, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ನ್ಯಾಯಪೀಠವು, ಇಂಥ ಪ್ರಕರಣ ಗಳನ್ನು ತಡೆಗಟ್ಟುವ ಸಂಬಂಧ ಚೌಕಟ್ಟು ರೂಪಿಸಲು ಜಂಟಿಯಾಗಿ ಸಭೆ ಸೇರುವಂತೆ ಆರ್‌ಬಿಐ, ದೂರಸಂಪರ್ಕ ಇಲಾಖೆ ಮತ್ತು ಸಂಬಂಧಿತ ಸಂಸ್ಥೆಗಳಿಗೆ ಸೂಚಿಸಿತ್ತು
- ಅಟಾರ್ನಿ ಜನರಲ್ ಆರ್ ವೆಂಕಟರಮಣಿ ಅವರ ಮೂಲಕ ಸದ್ಯ ಸಲ್ಲಿಸಿರುವ ವರದಿಯಲ್ಲಿ ಟೆಕ್ ದೈತ್ಯ ವಾಟ್ಸ್ ಆ್ಯಪ್ ಈ ವರ್ಷ ಜನವರಿಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ, ವಿವರಿಸಲಾಗಿದೆ.

Dr. Rajkumar IAS/KAS Academy

**ವರದಿಯ ಇತರ ಅಂಶಗಳು**

- ಬಳಕೆದಾರರ ರಕ್ಷಣೆಗಾಗಿ ಲೋಗೊ ಪತ್ತೆಹಚ್ಚುವಿಕೆ ವ್ಯವಸ್ಥೆಯನ್ನು ವಾಟ್ಸ್ ಆ್ಯಪ್ ಜಾರಿ ಮಾಡಿದೆ. ಇದು ಡಿಪಿಯಲ್ಲಿ (ಡಿಸ್ಪ ಪಿಕ್ಚರ್) ಪೊಲೀಸ್ ಮತ್ತು ಸರ್ಕಾರದ ಅಧಿಕೃತ ಚಿಹ್ನೆ ಇರುವ ಖಾತೆಗಳನ್ನು ಗುರುತಿಸಿ ಅದನ್ನು ಅಳಿಸಿಹಾಕಲಿದೆ
- ಹೊಸದಾಗಿ ರಚನೆಯಾದ ಖಾತೆಯಿಂದ ಕರೆ ಬಂದ ತಕ್ಷಣ ಬಳಕೆದಾರರನ್ನು ಎಚ್ಚರಿಸುವ ಹೊಸ ವ್ಯವಸ್ಥೆಯನ್ನು ವಾಟ್ಸ್ ಆ್ಯಪ್ ನೀಡಿದೆ
- ।ಸಂಶಯಾಸ್ಪದ, ಅಪರಿಚಿತ ಕರೆಗಳ ಪ್ರೊಫೈಲ್ ಫೋಟೊವನ್ನು ಸ್ವಯಂಚಾಲಿತವಾಗಿ ಮರೆಮಾಡುವ ವ್ಯವಸ್ಥೆಯನ್ನು ಅಳವಡಿಸಿದ
- ನಾಲ್ಕರಿಂದ ಆರು ವಾರಗಳ ಒಳಗಾಗಿ ಸಿಮ್ ಬೈಂಡಿಂಗ್ ಮೆಕ್ಯಾನಿಸಮ್ (ನೋಂದಾಯಿತ ಸಿಮ್ ಕಾರ್ಡ್ ಸಕ್ರಿಯವಾಗಿದ್ದಾಗ ಮಾತ್ರ ಕಾರ್ಯನಿರ್ವಹಿಸುವ ವ್ಯವಸ್ಥೆ) ಅನುಷ್ಠಾನಗೊಳಿಸುವುದಾಗಿ ವಾಟ್ಸ್ ಆ್ಯಪ್ ಭರವಸೆ ನೀಡಿದೆ.

## ❖ ಮಂಗಳೂರು ಪೀಠ: ಶಿವಮೊಗ್ಗ ಸೇರ್ಪಡೆಗೆ ವಿರೋಧ

- ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಮತ್ತು ಇದರ ವ್ಯಾಪ್ತಿಗೆ ಶಿವಮೊಗ್ಗ ಜಿಲ್ಲೆಯನ್ನೂ ಒಳಪಡಿಸಲಾಗುವುದು ಎಂಬ ಪ್ರಸ್ತಾವಕ್ಕೆ ಸದಾ ವಿರೋಧವಿದೆ' ಎಂದು ಶಿವಮೊಗ್ಗ, ಜಿಲ್ಲೆಯ ಬೆಂಗಳೂರು ನಿವಾಸಿ ವಕೀಲರ ವೇದಿಕೆ' ಸ್ಪಷ್ಟಪಡಿಸಿದೆ.
- ಈ ಬಗ್ಗೆ ವೇದಿಕೆಯ ವಕೀಲರು ಮಂಗಳವಾರ ಕ್ಯಾಪಿಟಲ್ ಹೋಟೆಲ್ನಲ್ಲಿ ತುರ್ತು ಸಭೆ ನಡೆಸಿದರು.
- 'ಹೈಕೋರ್ಟ್ನ ಯಾವುದೇ ಸಂಚಾರಿ ಪೀಠ ರಚನೆ ಮಾಡುವ ಮುನ್ನ ಏನೆಲ್ಲಾ ಮಾನದಂಡಗಳನ್ನು ಅನುಸರಿಸಬೇಕು ಎಂಬುದಕ್ಕೆ ಜಸ್ವಂತ್ ಸಿಂಗ್ ವರದಿಯಲ್ಲಿ ಉತ್ತರವಿದೆ ಇದರ ಅನುಸಾರ ವರದಿಯಲ್ಲಿನ 21 ಮಾನದಂಡಗಳನ್ನು ಅಧ್ಯಯನ ಮಾಡಿದ ನಂತರವೇ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಮತ್ತು ಈ ದಿಸೆಯಲ್ಲಿ ಸೂಕ್ತ ಅಧ್ಯಯನ ನಡೆಸಬೇಕು' ಎಂದು ಸಮಿತಿ ತೀರ್ಮಾನಿಸಿತು.
- ವರದಿ ಸಲ್ಲಿಸಲು ಹೈಕೋರ್ಟ್ ಹಿರಿಯ ವಕೀಲ ಶ್ರೀರಂಗ ಸುಬ್ಬಣ್ಣ ಅವರ ನೇತೃತ್ವದಲ್ಲಿ ಉಪಸಮಿತಿ ರಚಿಸಲಾಯಿತು ವೇದಿಕೆಯ ಸಂಚಾಲಕರನ್ನಾಗಿ ಹೈಕೋರ್ಟ್ ವಕೀಲ ಎಂ.ಚಾಮರಾಜ ಅವರನ್ನು ನೇಮಿಸಲಾಗಿದೆ.

## ❖ ಲಲಿತಕಲಾ ಅಕಾಡೆಮಿ: 20 ಕಲಾವಿದರಿಗೆ 'ವರ್ಣಶ್ರೀ ಪ್ರಶಸ್ತಿ' ಘೋಷಣೆ ಆರು ಕಲಾ ಸಾಧಕರಿಗೆ 'ಗೌರವ ಪ್ರಶಸ್ತಿ'

- ಕರ್ನಾಟಕ ಲಲಿತಕಲಾ ಅಕಾಡೆಮಿಯ 2024-2025 ಮತ್ತು 2025-26ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಆರು ಕಲಾ ಸಾಧಕರು ಆಯ್ಕೆಯಾಗಿದ್ದಾರೆ.
- ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅಕಾಡಮಿ ಅಧ್ಯಕ್ಷ ಪ.ಸ. ಕುಮಾರ್ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತ ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಿದರು.
- 2024-2025ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಬಾಗಲಕೋಟೆಯ ಬಾಬು ಜತ್ತಕರ್, ಕಲಬುರಗಿಯ ಎಂ.ಜಿ. ದೊಡ್ಡಮನಿ, ತುಮಕೂರಿನ ಕೆ.ಸಿ.ಎಸ್. ಪ್ರಸನ್ನ, 2025-26ನೇ ಸಾಲಿಗೆ ಹಾಸನದ ಬಿ.ಎಸ್ ದೇಸಾಯಿ, ವಿಜಯಪುರದ ಶಶಿಕಲಾ ಹೂಗಾರ್ ಹಾಗೂ ಮೈಸೂರಿನ ಸಿ.ಚಿಕ್ಕಣ್ಣ. ಭಾಜನ ರಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದೆ.
- **ವರ್ಣಶ್ರೀ' ಪ್ರಶಸ್ತಿ:** 2023-24 ಹಾಗೂ 2024-25ನೇ ಸಾಲಿಗೆ ತಲಾ 10 ಕಲಾವಿದರನ್ನು 'ವರ್ಣಶ್ರೀ ಪ್ರಶಸ್ತಿ ' ಗೆ ಆಯ್ಕೆ ಮಾಡಲಾಗಿದೆ. ಗದಗದ ವಿಜಯ ಕಿರಸೂರ, ಶಿರಸಿಯ ರವಿ ಗುಣಗ, ಹಾವೇರಿಯ ಕುಮಾರ ಕಾಟೇನಹಳ್ಳಿ, ಧಾರವಾಡದ ದಯಾನಂದ ಕೆ ಕಾಮಕರ್, ವಿಜಯಪುರದ ಸರೋಜ ಮುಂಡೇವಾಡಿ, ಕೊಡಗಿನ ಜಿ.ಎಸ್. ಭವಾನಿ, ಉಡುಪಿಯ ರಾಘವೇಂದ್ರ ನಾಯ್ಕ, ಮಂಡ್ಯದ ಶಿವಕುಮಾರ್ ಎಚ್.. ಮಂಗಳೂರಿನ ಮೋಹನ್ ಕುಮಾರ್ ಬಿ.ಪಿ. ಹಾಗೂ ಚಾಮರಾಜನಗರದ ಮಹದೇವ ಎಚ್. ಅವರು 2023-24ನೇ ಸಾಲಿನ 'ವರ್ಣಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

Dr.Rajkumar IAS/KAS Academy

- 2024-25ನೇ ಸಾಲಿಗೆ ಯಾದಗಿರಿಯ ಮೇಘನಾಥ ಅಬ್ರಾಹಂ ಬೆಳ್ಳಿ, ರಾಯಚೂರಿನ ಹೇಮರೆಡ್ಡಿ ಎನ್. ಬೀದರ್ನ ವೈಶಾಲಿಬಾಯಿ ಕಾಂಬಳೆ, ಕೊಪ್ಪಳದ ತಿರುಪತಿ ಶಿವನಗುತ್ತಿ ಬಳ್ಳಾರಿಯ ಎ. ಮಹಮದ್ ರಫಿ, ದಾವಣಗೆರೆಯ ಉದಯ್ ಕುಮಾರ್ ಡಿ ಜೈನ್, ಚಿತ್ರದುರ್ಗದ ದಿನೇಶ್ ಬಿ.. ಬೆಂಗಳೂರಿನ ಎಸ್.ಎಫ್ ಹುಸೇನಿ, ರಾಮನಗರದ ಗಂಗಾಧರಮೂರ್ತಿ ಹಾಗೂ ಬೆಂಗಳೂರಿನ ಪೂರ್ಣಿಮಾ ಯಲ್ಲಾಪುರಕರ್ ಅವರು ವರ್ಣಶ್ರೀ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ.
- 2024-25ನೇ ಸಾಲಿನ 53ನೇ ವಾರ್ಷಿಕ ಕಲಾ ಬಹುಮಾನಕ್ಕೆ ಹತ್ತು ಕಲಾವಿದರ ಕಲಾಕೃತಿಗಳು ಆಯ್ಕೆಯಾಗಿವೆ. ಈ ಬಹುಮಾನ ತಲಾ ₹ 25 ಸಾವಿರ ನಗದು ಹೊಂದಿದೆ.

## ❖ ಮದ್ಯದಲ್ಲಿನ ಅಲ್ಕೋಹಾಲ್ ಪ್ರಮಾಣಕ್ಕೆ ಅನುಗುಣವಾಗಿ ತೆರಿಗೆ; ಸಾಮಾಜಿಕ ಪರಿಣಾಮಗಳೂ ಗಣನೆಗೆ: ಸುರಕ್ಷಿತ ಕರ್ನಾಟಕಕ್ಕೆ ಅಬಕಾರಿ ಸುಧಾರಣೆ

- ಕಳೆದ ಅರವತ್ತು ವರ್ಷಗಳಲ್ಲಿ ಕರ್ನಾಟಕದ ಅಬಕಾರಿ ವ್ಯವಸ್ಥೆ ಯಾವುದೇ ಪ್ರಮುಖ ಬದಲಾವಣೆಗಳಿಲ್ಲದೆ ಸಾಗಿಬಂದಿದೆ. ಈ ವ್ಯವಸ್ಥೆಯನ್ನು ನೇರ ಮೇಲುಸ್ತುವಾರಿ ಹಾಗೂ ಭೌತಿಕ ನಿಯಂತ್ರಣದ ಮಾದರಿಯಲ್ಲಿ ರೂಪಿಸಲಾಗಿದೆ. ಇದರ ಪ್ರಮುಖ ಉದ್ದೇಶ ಸ್ಥಿರ ಆದಾಯ ಗಳಿಕೆ. ಈ ವ್ಯವಸ್ಥೆಯು ಇಲ್ಲಿಯವರೆಗೂ ನಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುತ್ತಾ ಬಂದಿದೆ. ಆದರೆ, ಈ ಅವಧಿಯಲ್ಲಿ ನಮ್ಮ ಸುತ್ತಲಿನ ಪ್ರಪಂಚ ಹಾಗೂ ಮದ್ಯಪಾನದ ಸಾಮಾಜಿಕ ಪರಿಣಾಮಗಳ ಕುರಿತಾದ ನಮ್ಮ ತಿಳಿವಳಿಕೆ ಕೂಡ ಸಾಕಷ್ಟು ವಿಕಸನಗೊಂಡಿದೆ.
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026ರ ಬಜೆಟ್ ಭಾಷಣದಲ್ಲಿ ಮದ್ಯದ ಅಬಕಾರಿ ತೆರಿಗೆ ಹಾಗೂ ನಿಯಂತ್ರಣ ನಿಟ್ಟಿನಲ್ಲಿ ಮಹತ್ವದ ಸುಧಾರಣೆಗೆ ಚಾಲನೆ ನೀಡಿದ್ದಾರೆ ಬಜೆಟ್ನಲ್ಲಿ ಮಾಡಲಾದ ಘೋಷಣೆಗಳಿಗೆ ಪೂರಕವಾಗಿ ಅಬಕಾರಿ ಸುಂಕದ ಹೊಸ ಸ್ವರೂಪದ ಕರಡನ್ನು ಪ್ರಕಟಿಸಿ ಕಳೆದ ವಾರ ಅಧಿಸೂಚನೆ ಹೊರಡಿಸಲಾಗಿದೆ. ಇದು ಕೇವಲ ತೆರಿಗೆ ಹಂತಗಳ ತಾಂತ್ರಿಕ ಹೊಂದಾಣಿಕೆಯಲ್ಲ ಬದಲಿಗೆ ಅಬಕಾರಿ ವ್ಯವಸ್ಥೆಯನ್ನು ಮೂಲದಿಂದಲೇ ಮರುವಿನ್ಯಾಸಗೊಳಿಸುವ ಪ್ರಯತ್ನ.
- ದೇಶದಲ್ಲಿ ಇದೇ ಮೊದಲ ಬಾರಿಗೆ ರಾಜ್ಯವೊಂದು, ಹೆಚ್ಚಿನ ಆದಾಯ ಗಳಿಕೆಗೆ ಆದ್ಯತೆ ನೀಡುವ ಮಾದರಿಯಿಂದ ದೂರ ಸರಿದು- ಸಾರ್ವಜನಿಕ ಆರೋಗ್ಯ, ಸಾಮಾಜಿಕ ಜವಾಬ್ದಾರಿ ಹಾಗೂ ಹಾನಿಯ ಪ್ರಮಾಣವನ್ನು ಕಡಿಮೆ ಮಾಡುವುದು- ಈ ಮೂರು ವಿಚಾರಗಳ ನಡುವೆ ಸಮತೋಲನ ಸಾಧಿಸಲು ಮುಂದಾಗಿದೆ.
- ಕರ್ನಾಟಕ ಸರ್ಕಾರವು ರಚಿಸಿದ ಅಬಕಾರಿ ವರಮಾನ ಸಂಗ್ರಹ ಸಲಹಾ ಸಮಿತಿ (ಆರ್ಎಂಸಿ) ಒಂದು ವರ್ಷದಲ್ಲಿ ರಾಜ್ಯದ ಹಣಕಾಸು ಸಾಮರ್ಥ್ಯ ಮತ್ತು ಆಡಳಿತವನ್ನು ಸುಧಾರಿಸಲು ಹಲವಾರು ಶಿಫಾರಸುಗಳನ್ನು ಮಾಡಿದೆ ಅಬಕಾರಿ ಸುಧಾರಣೆಗಳ ಕುರಿತಾಗಿ ಸಮಿತಿ ಇತ್ತೀಚೆಗೆ ಸಲ್ಲಿಸಿರುವ ಕರಡು ವರದಿಯಲ್ಲಿ ರಾಜ್ಯದ ಅಬಕಾರಿ ತೆರಿಗೆ ಮತ್ತು ಮದ್ಯದ ನಿಯಂತ್ರಣದಲ್ಲಿ ಆಮೂಲಾಗ್ರ ಮತ್ತು ಮೂಲಭೂತ ಬದಲಾವಣೆಗಳನ್ನು ತರುವ ಕುರಿತು ಶಿಫಾರಸು ಮಾಡಿದೆ.
- ಈ ಸುಧಾರಣೆಗೆ ಪ್ರಮುಖ ಕಾರಣವಾಗಿರುವುದು, ಮದ್ಯಪಾನ ಉಂಟುಮಾಡುತ್ತಿರುವ ಸಾಮಾಜಿಕ ಪರಿಣಾಮಗಳು ಮದ್ಯ ಉಂಟು ಮಾಡುವ ಹಾನಿಯಿಂದಾಗುವ ಆರ್ಥಿಕ ನಷ್ಟವು ದೇಶದ ಜಿಡಿಪಿಯ ಶೇ 1.45ರಿಂದ ಶೇ 2.6ರಷ್ಟಿದೆ ಎಂದು ಹೇಳುತ್ತವೆ ಅಧ್ಯಯನಗಳು ದೇಶದಲ್ಲಿ ಕಂಡುಬರುತ್ತಿರುವ ಈ ಪ್ರವೃತ್ತಿಗೆ ಪೂರಕವಾಗಿ ಕರ್ನಾಟಕಕ್ಕೆ ಸಂಬಂಧಿಸಿದ ಲಭ್ಯ ದಾಖಲೆಗಳು ರಾಜ್ಯವು ಮದ್ಯದ ಕಾರಣದಿಂದ ಸ್ವಲ್ಪ ಹೆಚ್ಚೇ ಸಾಮಾಜಿಕ ಆರ್ಥಿಕ ಹೊರೆಯ ಸವಾಲು ಎದುರಿಸುತ್ತಿರುವುದನ್ನು ತೋರಿಸುತ್ತವೆ. ಅಂದಾಜು ಶೇ 2ರಷ್ಟು ಸಾಮಾಜಿಕ ನಷ್ಟವನ್ನು ಲೆಕ್ಕ ಹಾಕಿದರೆ ಈ ಮೊತ್ತ ವಾರ್ಷಿಕವಾಗಿ ₹51 ಸಾವಿರ ಕೋಟಿಯಾಗುತ್ತದೆ ಇವು ಕೇವಲ ಅಂಕಿ ಅಂಶಗಳಲ್ಲ ಕೌಟುಂಬಿಕ ಹಿಂಸಾಚಾರದ ರೂಪದಲ್ಲಿ ಕರ್ನಾಟಕದ ಕುಟುಂಬಗಳು ಪ್ರತಿದಿನ ಭರಿಸುತ್ತಿರುವ ಹಣ.

Dr. Rajkumar IAS/KAS Academy

- ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದರಿಂದ ನಮ್ಮ ರಸ್ತೆಗಳಲ್ಲಿ ಸಾವಿರಾರು ಸಾವುಗಳು ಸಂಭವಿಸುತ್ತಿರುತ್ತವೆ ಸಾವಿರಾರು ಜನರು ಗಾಯಗೊಳ್ಳುತ್ತಾರೆ. ಇವುಗಳೆಲ್ಲವೂ ತಡೆಗಟ್ಟಬಹುದಾದ ಸಾವು ನೋವುಗಳು. ಇದರ ನಿರ್ವಹಣೆಗೆ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಣ ವ್ಯಯಿಸುತ್ತಿದೆ. ಮಾತ್ರವಲ್ಲ. ಮದ್ಯ ಕುಡಿತದಿಂದಾಗಿ ಉಂಟಾಗುವ ಯಕೃತ್ತಿನ ಕಾಯಿಲೆ ಹಾಗೂ ಇನ್ನಿತರ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ಜವಾಬ್ದಾರಿಯನ್ನು ಹೊರಬೇಕಾದ ಒತ್ತಡದಲ್ಲಿರುವ ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಕೂಡ ಈ ಮೊತ್ತವನ್ನು ಭರಿಸುತ್ತಿದೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ, ಗಳಿಸುವ ಕಡಿಮೆ ಆದಾಯವನ್ನು ಆಹಾರ, ಶಿಕ್ಷಣ ಮತ್ತು ಆರೋಗ್ಯಕ್ಕೆ ಮೀಸಲಿಡಬೇಕಾದ ನಮ್ಮ ಬಡ ಕುಟುಂಬಗಳು ಅದನ್ನು ಮದ್ಯಕ್ಕೆ ಖರ್ಚು ಮಾಡುತ್ತಿರುವುದು ಅತ್ಯಂತ ದುರದೃಷ್ಟಕರ ಸಂಗತಿ.
- ಆದರೆ, ಈ ಸನ್ನಿವೇಶವು ಮದ್ಯ ನಿಷೇಧದಂತಹ ಸುಲಭವಾದ ತಕ್ಷಣದ ಪ್ರತಿಕ್ರಿಯೆಗೆ ದಾರಿ ಮಾಡಬಾರದು ಮದ್ಯನಿಷೇಧ ಯಶಸ್ವಿಯಾಗುವುದಿಲ್ಲ. ಎಂಬುದಕ್ಕೆ ಭಾರತದ ಕೆಲವು ರಾಜ್ಯಗಳಲ್ಲಿ ಹಾಗೂ ಪ್ರಪಂಚದಲ್ಲಿ ಹಲವು ಪುರಾವೆಗಳಿವೆ. ವಾಸ್ತವದಲ್ಲಿ ಮದ್ಯ ನಿಷೇಧ ಎನ್ನುವ 'ಚಿಕಿತ್ಸೆ'ಯು ಮೂಲ ಕಾಯಿಲೆಗಿಂತಲೂ ಕೆಟ್ಟದಾಗಿದೆ. ಯಾಕೆಂದರೆ ನಿಷೇಧವು ಬೇಜವಾಬ್ದಾರಿತನದ ಕುಡಿತದ ಸಮಸ್ಯೆಯನ್ನು ಹೋಗಲಾಡಿಸುವುದಿಲ್ಲ. ಬದಲಿಗೆ ಸರ್ಕಾರದ ಜಾರಿ ವ್ಯವಸ್ಥೆಯ ಸೀಮಿತ ಸಾಮರ್ಥ್ಯದ ಮೇಲೆ ಇನ್ನಷ್ಟು ಒತ್ತಡ ಉಂಟುಮಾಡುತ್ತದೆ ಮತ್ತು ಭ್ರಷ್ಟಾಚಾರವನ್ನು ವ್ಯವಸ್ಥಿತಗೊಳಿಸುತ್ತದೆ
- ದುರದೃಷ್ಟವಶಾತ್, ನಮ್ಮ ಪ್ರಸ್ತುತ ತೆರಿಗೆ ವ್ಯವಸ್ಥೆಯು ಎಲ್ಲಾ ಸಾಮಾಜಿಕ ವೆಚ್ಚಗಳ ವಾಸ್ತವಿಕತೆಗಳನ್ನು ಸಮರ್ಪಕವಾಗಿ ನಿಭಾಯಿಸುವ ನಿಟ್ಟಿನಲ್ಲಿ ರೂಪುಗೊಂಡಿಲ್ಲ. ಇದು ಮದ್ಯದ ಮೇಲೆ ತೆರಿಗೆಯನ್ನು ಮದ್ಯದಲ್ಲಿರುವ ಅಲೋಹಾಲ್ ಪ್ರಮಾಣಕ್ಕಿಂತ ಹೆಚ್ಚಾಗಿ ಬೆಲೆ ಮತ್ತು ಉತ್ಪನ್ನದ ವರ್ಗದ ಆಧಾರದ ಮೇಲೆ ವಿಧಿಸುತ್ತದೆ ಇದು ಒಂದು ರೀತಿಯ ವಿರೋಧಾಭಾಸದ ಪರಿಸ್ಥಿತಿಯನ್ನು ಉಂಟುಮಾಡುತ್ತದೆ ಅಂದರೆ, ಅತಿ ಹೆಚ್ಚು, ಅಮಲೇರಿಸುವ ಮತ್ತು ಅತ್ಯಂತ ಹಾನಿಕಾರಕವಾದ 'ಎಕಾನಮಿ' ಮದ್ಯಕ್ಕೆ ಅದು ಉಂಟುಮಾಡುವ ಹಾನಿಗೆ ಹೋಲಿಸಿದರೆ ಕಡಿಮೆ ತೆರಿಗೆ ವಿಧಿಸಲಾಗುತ್ತಿದೆ ಆದರೆ ಪ್ರೀಮಿಯಂ ಉತ್ಪನ್ನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗುತ್ತಿದೆ.

**ಕರ್ನಾಟಕ ರಾಜ್ಯ ಅಬಕಾರಿ ಸುಧಾರಣೆಗಳು (2026) ನಾಲ್ಕು, 'ಮೂಲ ತತ್ವ' ಆಧರಿಸಿವೆ.**

**<u>1. ಆಲೋಹಾಲ್ ಪ್ರಮಾಣ ಆಧರಿತ ತೆರಿಗೆ ವ್ಯವಸ್ಥೆ</u>** ಮದ್ಯ ಕುಡಿತದಿಂದ ಉಂಟಾಗುವ ಹಾನಿಯು ಅವರು ಸೇವಿಸುವ ಆಲೋಹಾಲ್ ಪ್ರಮಾಣವನ್ನು ಆಧರಿಸಿರುತ್ತದೆ ಆದ್ದರಿಂದ, ಒಂದು ಲೀಟರ್ ಶುದ್ಧ ಆಲೋಹಾಲ್ ಮೇಲಿನ ತೆರಿಗೆಯು (ಎಲ್‌ಎಐಬಿ) ಪ್ರತಿಯೊಂದು ಮದ್ಯಕ್ಕೂ ಅದರ ಹಾನಿಯ ಸಂಭಾವ್ಯಕ್ಕೆ ಅನುಗುಣವಾಗಿಯೇ ತೆರಿಗೆ ವಿಧಿಸುವುದನ್ನು ಖಚಿತಪಡಿಸುತ್ತದೆ.

**<u>2 ಸಾಮಾಜಿಕ ಪರಿಣಾಮಗಳನ್ನು ಒಳಗೊಂಡಿರುವುದು</u>** ನಾವು ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಪ್ರತಿ ಲೀಟರ್ ಶುದ್ಧ ಆಲೋಹಾಲ್ಗೆ ಅಂದಾಜು ₹2,000ದಷ್ಟು ಸಾಮಾಜಿಕ ಪರಿಣಾಮಗಳ ಮಾನದಂಡದ ವೆಚ್ಚ ವನ್ನು ನಿಗದಿಪಡಿಸಿದ್ದೇವೆ ಅದಕ್ಕೆ ಅನುಗುಣವಾಗಿ ಮದ್ಯದ ತೆರಿಗೆ ವರಗಳನ್ನು ಹೊಂದಿಸುವ ಮೂಲಕ ಮದ್ಯವು ಸಮಾಜದ ಮೇಲೆ ಹೇರುವ ಬಾಹ್ಯ ವೆಚ್ಚಗಳನ್ನು ಸರಿದೂಗಿಸುವುದು ನಮ್ಮ ಗುರಿಯಾಗಿದೆ

**<u>3 ಮಿತ ಕುಡಿತವನ್ನು ಉತ್ತೇಜಿಸುವುದು</u>** ನಾವು ಮದ್ಯದಲ್ಲಿನ ಆಬೋಹಾಲ್ ಪ್ರಮಾಣಕ್ಕೆ ತಕ್ಕಂತೆ ತೆರಿಗೆ ವಿಧಿಸುತ್ತೇವೆ ಈ ಮೂಲಕ ಜಾಗತಿಕ ಪದ್ಧತಿಗಳಿಗೆ ಅನುಗುಣವಾಗಿ ಉತ್ಪಾದಕರು ಹಾಗೂ ಗ್ರಾಹಕರು ಕಡಿಮೆ ಆಲೋಹಾಲ್ ಸಾಮರ್ಥ್ಯದ ಮದ್ಯಗಳತ್ತ ವಾಲುವಂತೆ ಉತ್ತೇಜನ ನೀಡುತ್ತೇವೆ.

**4. ಆಡಳಿತದ ಆಧುನೀಕರಣ:** ನಾವು ಈ ಹಿಂದಿನ 'ಪರ್ಮಿಟ್ ರಾಜ್' ಹಾಗೂ ಭೌತಿಕ ತಪಾಸಣೆ ಪದ್ಧತಿಗಿಂತ ಭಿನ್ನವಾದ, ಪಾರದರ್ಶಕವಾದ 'ಡಿಜಿಟಲ್ ಟ್ರ್ಯಾಕ್ ಆ್ಯಂಡ್ ಟ್ರೇಸ್' ತಂತ್ರಜ್ಞಾನದತ್ತ ಅಡಿಯಿಡುತ್ತಿದ್ದೇವೆ. ಇದರಿಂದ ಅಕ್ರಮ ವ್ಯಾಪಾರವನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಜಾರಿಗೆ ಬರುತ್ತದೆ.
ಇಂತಹ ಮೂಲ ಸ್ವರೂಪದ ಬದಲಾವಣೆ ದಿನಬೆಳಗಾಗುವುದರೊಳಗೆ ಸಂಭವಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿಯೇ ನಾವು ಹಂತಹಂತದ ಸ್ಪಷ್ಟ ಯೋಜನೆಯನ್ನು ಸೂಚಿಸಿದ್ದೇವೆ.

- ➢ **ಹಂತ 1** (2026-27ನೇ ಹಣಕಾಸು ವರ್ಷ): ಕರ್ನಾಟಕ ಸರ್ಕಾರ ದರದ ಸ್ಲ್ಯಾಬ್‌ಗಳನ್ನು 16ರಿಂದ 8ಕ್ಕೆ ನಿಗದಿಪಡಿಸುವ ಮೂಲಕ ಈಗಾಗಲೇ ಈ ಹಂತವನ್ನು ಆರಂಭಿಸಿದೆ. ಈ ವರ್ಷ ರಾಜ್ಯವು ಹೈಬ್ರಿಡ್ ತೆರಿಗೆ ರಚನೆಯನ್ನು ಪರಿಚಯಿಸಲು ಪ್ರಸ್ತಾಪಿಸಿದೆ. ಆಲೋಹಾಲ್ ಪ್ರಮಾಣಕ್ಕೆ ಸಂಬಂಧಿಸಿದ ಏಕರೂಪದ ಸುಂಕದೊಂದಿಗೆ ಸರಳೀಕೃತ ಹೆಚ್ಚುವರಿ ಸುಂಕವೂ ಸೇರಿ, ಈ ಪರಿವರ್ತನೆಯನ್ನು ಸುಗಮಗೊಳಿಸುತ್ತದೆ. ಈ ಸುಧಾರಣೆಯು ಆಲೋಹಾಲ್ ಪ್ರಮಾಣಕ್ಕೆ ಸಂಬಂಧಿಸಿರುವುದರಿಂದ ಕೆಲವು ವಿಭಾಗಗಳಲ್ಲಿ ಬೆಲೆ ಏರಿಕೆಗೆ ಮತ್ತು ಇನ್ನು ಕೆಲವು ವಿಭಾಗಗಳಲ್ಲಿ ಬೆಲೆ ಇಳಿಕೆಗೆ ಕಾರಣವಾಗಬಹುದು ಎಂಬ ಅರಿವು ನಮಗಿದೆ ಈ ಬದಲಾವಣೆಗಳು ಕನಿಷ್ಠ ಮಟ್ಟದಲ್ಲಿರುವಂತೆ ನೋಡಿಕೊಳ್ಳಲು ಪ್ರಯತ್ನಿಸಲಾಗಿದೆ.
- ➢ **ಹಂತ 2** (2027-28ನೇ ಹಣಕಾಸು ವರ್ಷ) ಸರ್ಕಾರವು ರಾಜ್ಯದಾದ್ಯಂತ ಡಿಜಿಟಲ್ ಟ್ರ್ಯಾಕ್-ಆಂಡ್-ಟ್ರೇಸ್ ವ್ಯವಸ್ಥೆಯನ್ನು ಜಾರಿಗೆ ತರುವುದರ ಜೊತೆಯಲ್ಲಿಯೇ, ಸಾಮಾಜಿಕ ಪರಿಣಾಮಗಳ ಮಾನದಂಡಕ್ಕೆ ತಕ್ಕಂತೆ ವೆಚ್ಚಗಳನ್ನು ಹೊಂದಿಸುವುದನ್ನು ಮುಂದುವರಿಸಲಾಗುವುದು.
- ➢ **ಹಂತ 3** (2029-30ನೇ ಹಣಕಾಸು ವರ್ಷ) ಸುಧಾರಿತ ವ್ಯವಸ್ಥೆಯು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿದೆ ಅಬಕಾರಿ ದರವನ್ನು ಅಂದಾಜು ಜಿಎಸ್ಡಿಪಿ ಬೆಳವಣಿಗೆಗೆ ಅನುಗುಣವಾಗಿ ನಿಗದಿಪಡಿಸಲಾಗುವುದು ಆಲೋಹಾಲ್ನಿಂದ ಸಾಮಾಜಿಕ ಪರಿಣಾಮಗಳು ಹೆಚ್ಚಾದಂತೆ ಆ ಮದ್ಯದ ಮೇಲಿನ ತೆರಿಗೆಯೂ ಹೆಚ್ಚುತ್ತಾ ಹೋಗುತ್ತದೆ
- ➢ ಈ ಸುಧಾರಣೆಯ ಪ್ರಮುಖ ಭಾಗವೆಂದರೆ, ಈ ತೆರಿಗೆಗಳಿಂದ ಸಂಗ್ರಹಿಸಲಾದ ಆದಾಯದ ಒಂದು ಭಾಗವನ್ನು ಮದ್ಯ ಕುಡಿತದಿಂದ ಉಂಟಾದ ಹಾನಿಗಳನ್ನು ಸರಿಪಡಿಸಲು ಬಳಸುವುದು

- ಅಬಕಾರಿ ಆದಾಯದ ಒಂದು ನಿರ್ದಿಷ್ಟ ಪಾಲನ್ನು ನಾಲ್ಕು ನಿರ್ಣಾಯಕ ಕ್ಷೇತ್ರಗಳಿಗೆ ಮೀಸಲಿಡಲು ಶಾಸನಬದ್ಧವಾಗಿ ಕ್ರಮ ಕೈಗೊಳ್ಳಬೇಕೆಂದು ಆರ್ಎಂಸಿ ಶಿಫಾರಸು ಮಾಡಿದ ವ್ಯಸನಮುಕ್ತಿ ಮತ್ತು ಮಾನಸಿಕ ಆರೋಗ್ಯ ಸೇವೆಗಳು, ರಸ್ತೆ ಸುರಕ್ಷ ಕೌಟುಂಬಿಕ ಹಿಂಸಾಚಾರ ತಡೆಗಟ್ಟುವಿಕೆ ಮತ್ತು ಯುವಜನರ ಶಿಕ್ಷಣ, ಈ ಜವಾಬ್ದಾರಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನೀಡಲಾಗುವುದು.
- ಅಬಕಾರಿ ಕುರಿತಾದ ಆರ್ಎಂಸಿ ಕರಡು ವರದಿಯನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಲಾಗಿದೆ. ಸಾರ್ವಜನಿಕ ಆರೋಗ್ಯ ತಜ್ಞರು, ಉತ್ಪಾದಕರು, ಚಿಲ್ಲರೆ ಮಾರಾಟಗಾರರು ಮತ್ತು ಮುಖ್ಯವಾಗಿ ಕರ್ನಾಟಕದ ನಾಗರಿಕರನ್ನು ಆರ್ಎಂಸಿಯೊಂದಿಗೆ ಸಮಾಲೋಚನೆ ನಡೆಸಲು ನಾವು ಆಹ್ವಾನಿಸುತ್ತಿದ್ದೇವೆ ಎಲ್ಲಾ ಪ್ರಶ್ನೆಗಳಿಗೆ ನಮ್ಮ ಬಳಿ ಉತ್ತರಗಳಿವೆ ಎಂದು ನಾವು ಹೇಳಿಕೊಳ್ಳುವುದಿಲ್ಲ 60 ವರ್ಷ ಹಳೆಯ ವ್ಯವಸ್ಥೆಯನ್ನು ಸುಧಾರಿಸುವುದು ಒಂದು ಸಂಕೀರ್ಣ ಕಾರ್ಯವಾಗಿದ್ದು. ಇದಕ್ಕೆ ಸಾಮುದಾಯಿಕ ತಿಳಿವಳಿಕೆಯ ಅಗತ್ಯವಿದೆ.
- ಈ ವರದಿಯನ್ನು ಓದಲು, ಸಂವಾದದಲ್ಲಿ ಪಾಲ್ಗೊಳ್ಳಲು ಮತ್ತು ಹೆಚ್ಚು ಸುಸಂಬದ್ಧ ಪಾರದರ್ಶಕ ಮತ್ತು ಸಾಮಾಜಿಕವಾಗಿ ಜವಾಬ್ದಾರಿಯುತ ಕರ್ನಾಟಕವನ್ನು ನಿರ್ಮಿಸಲು ನಮಗೆ ಸಹಾಯ ಮಾಡಲು ನಿಮ್ಮಲ್ಲಿ ವಿನಂತಿಸುತ್ತೇವೆ. ನಾವು ಒಟ್ಟಾಗಿ ಸೇರಿ, ತಡೆಗಟ್ಟಬಹುದಾದ ಮಾದಕದ್ರವ್ಯ ವ್ಯಸನದ ವೆಚ್ಚಗಳಿಂದ ನಮ್ಮ ರಾಜ್ಯದ ಪ್ರಗತಿಯು ಕುಂಠಿತವಾಗದಂತೆ ನೋಡಿಕೊಳ್ಳಬಹುದು ಮತ್ತು ಕರ್ನಾಟಕದ ಪ್ರತಿ ಕುಟುಂಬವು ಸುರಕ್ಷೆ ಮತ್ತು ಘನತೆಯಿಂದ ಬದುಕುವಂತೆ ಮಾಡಬಹುದು

## ❖ 5ನೇ "ಎಸ್–400 ಟ್ರಿಂಫ್' ಕ್ಷಿಪಣಿ ವ್ಯವಸ್ಥೆ ನಿರೀಕ್ಷೆಯಲ್ಲಿ ಭಾರತ

- ನಾಲ್ಕನೇ 'ಎಸ್-400 ಟ್ರಿಂಫ್' ಕ್ಷಿಪಣಿ ವ್ಯವಸ್ಥೆಯು ಮುಂದಿನ ತಿಂಗಳಾರಂಭದಲ್ಲಿ ರಷ್ಯಾದಿಂದ ಭಾರತಕ್ಕೆ ತಲುಪುವ ನಿರೀಕ್ಷೆಯಿದೆ ಎಂದು ಭದ್ರತಾ ಸಂಸ್ಥೆಯಲ್ಲಿನ ಮೂಲಗಳು ತಿಳಿಸಿವೆ.
- ಐದನೇ 'ಎಸ್-400 ಟ್ರಿಂಫ್' ಕ್ಷಿಪಣಿ ವ್ಯವಸ್ಥೆಯು ನವೆಂಬರ್‌ನಲ್ಲಿ ಪೂರೈಕೆಯಾಗಬಹುದು ಎಂದು ಮೂಲಗಳು ತಿಳಿಸಿವೆ.

Dr. Rajkumar IAS/KAS Academy

## ❖ 89 ಒಪ್ಪಂದ, ₹7,747 ಕೋಟಿ ಹೂಡಿಕೆ: ಪ್ರಿಯಾಂಕ್: ಬೆಂಗಳೂರಿಗೆ ಅಗ್ರ ಪಟ್ಟ

- ಭಾರತದ ನವೋದ್ಯಮ ಕ್ಷೇತ್ರದಲ್ಲಿ 2026 ರ ಮೊದಲ ಮೂರು ತಿಂಗಳ ಅವಧಿಯಲ್ಲಿ ಬೆಂಗಳೂರು ಅಗ್ರಪಟ್ಟದಲ್ಲೇ ಮುಂದುವರೆದಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.
- ಈ ಅವಧಿಯಲ್ಲಿ 89 ಒಪ್ಪಂದಗಳ ಮೂಲಕ (7,747 ಕೋಟಿ ಹೂಡಿಕೆ ಆಗಿದೆ ಇದು ಇತರ ಪ್ರತಿಸ್ಪರ್ಧಿ ನಗರಗಳಿಗಿಂತಲೂ ಉತ್ತಮ ಮುನ್ನಡೆ ಎಂದು ಅವರು ಹೇಳಿದ್ದಾರೆ.
- ದೆಹಲಿ 74 ಒಪ್ಪಂದ ಮಾಡಿಕೊಂಡಿದ್ದು ಸುಮಾರು ₹4,300 ಕೋಟಿ ಹೂಡಿಕೆ ಆಗಿದೆ ಮುಂಬೈ 34 ಒಪ್ಪಂದ ಮಾಡಿಕೊಂಡಿದ್ದು ಸುಮಾರು 3,000 ಕೋಟಿ ಹೂಡಿಕೆ ಆಗಿದೆ ಇದು ಬಂಡವಾಳ ಹರಿವು ಮತ್ತು ಒಪ್ಪಂದದ ವೇಗ ಎರಡರಲ್ಲೂ ಇರುವ ಸ್ಪಷ್ಟ ಅಂತರವನ್ನು ಸೂಚಿಸುತ್ತದೆ ಎಂದಿದ್ದಾರೆ
- 'ಬೆಂಗಳೂರು ಈಗ ಅಮೆರಿಕ, ಯುರೋಪ್ ಮತ್ತು ಚೀನಾದ ಹೊರಗೆ ಅತಿ ದೊಡ್ಡ ನವೋದ್ಯಮ ಕೇಂದ್ರವಾಗಿ ಮತ್ತು ಜಾಗತಿಕವಾಗಿ 5 ನೇ ಅತಿದೊಡ್ಡ ಯೂನಿಕಾರ್ನ್ ಕೇಂದ್ರವಾಗಿ ಬೆಳೆದಿದೆ ನಮ್ಮ ನಾಯಕತ್ವವು ಬಂಡವಾಳ ಮತ್ತು ಉತ್ತಮ ಗುಣಮಟ್ಟದ ಉದ್ಯಮಿಗಳನ್ನು ಆಕರ್ಷಿಸುತ್ತಲೇ ಇದೆ' ಎಂದು ಹೇಳಿದ್ದಾರೆ
- 'ಡೀಪ್ ಟೆಕ್ನಿಂದ ದೈನಂದಿನ ತಂತ್ರಜ್ಞಾನದವರೆಗೆ ಬೆಂಗಳೂರಿನ ನವೋದ್ಯಮಗಳು ಪ್ರತಿಯೊಂದು ಪ್ರಮುಖ ವಲಯದಲ್ಲೂ ಪ್ರಾಬಲ್ಯ ಸಾಧಿಸಿವೆ ಬೆಂಗಳೂರು ನಗರವು ಭಾರತದ ತಂತ್ರಜ್ಞಾನ ಆರ್ಥಿಕತೆ ಕೇಂದ್ರವಾಗಿದೆ' ಎಂದು ಪ್ರಿಯಾಂಕ್ ಪ್ರತಿಪಾದಿಸಿದ್ದಾರೆ.

## ❖ ಕೊಲಂಬಿಯಾದ 80 ನೀರಾನೆಗಳ ರಕ್ಷಣೆಗೆ ಮುಂದಾದ 'ವಂತಾರ'

- ಕೊಲಂಬಿಯಾದಲ್ಲಿ ಸಂಕಷ್ಟದಲ್ಲಿರುವ 80 ನೀರಾನೆಗಳನ್ನು ಸುರಕ್ಷಿತವಾಗಿ ಭಾರತಕ್ಕೆ ಸ್ಥಳಾಂತರಿಸಿ, ಅವುಗಳ ಜೀವನಪರ್ಯಂತ ಕಾಳಜಿ ಮಾಡಲು ಪ್ರಾಣಿ ಸಂರಕ್ಷಣೆ ಮತ್ತು ಪುನರ್ವಸತಿ ಕೇಂದ್ರ ವಂತಾರ ಮುಂದಾಗಿದೆ.
- ಈ ಬಗ್ಗೆ, ವಂತಾರದ ಸ್ಥಾಪಕ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ನ ಕಾರ್ಯನಿರ್ವಾಹಕ ನಿರ್ದೇಶಕ ಆನಂತ್ ಅಂಬಾನಿ ಅವರು ಕೊಲಂಬಿಯಾ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.
- ಕೊಲಂಬಿಯಾದ ಮಗ್ದಲಿನಾ ನದಿ ಪಾತ್ರದಲ್ಲಿರುವ 80 ನೀರಾನೆಗಳ ಹತ್ಯೆಗೆ ಅಲ್ಲಿನ ಸರ್ಕಾರ ನಿರ್ಧರಿಸಿದ. ಈ ಬೆನ್ನಲ್ಲೇ. ಕೂಲಂಬಿಯಾದ ಪರಿಸರ ಹಾಗೂ ಸುಸ್ಥಿರ ಅಭಿವೃದ್ಧಿ ಸಚಿವ ವೆಲೆಜ್ ಟೊರೆಸ್ ಅವರಿಗೆ ಪತ್ರ ಬರೆದಿರುವ ಅನಂತ್ ಅವರು, 'ಈ ನಿರ್ಧಾರವನ್ನು ತಡೆಹಿಡಿದು, ಮಾನವೀಯ ನೆಲೆಯಲ್ಲಿ ಪರ್ಯಾಯ ಮಾರ್ಗವನ್ನು ಆಲೋಚಿಸಿ' ಎಂದು ಮನವಿ ಮಾಡಿದ್ದಾರ.
- 80 ನೀರಾನೆಗಳನ್ನು ಸುರಕ್ಷಿತ ಮತ್ತು ವೈಜ್ಞಾನಿಕ ರೀತಿಯಲ್ಲಿ ಸ್ಥಳಾಂತರ ಮಾಡಿ, ಗುಜರಾತ್ನ ಜಾಮ್ ನಗರದಲ್ಲಿರುವ ವಂತಾರದಲ್ಲಿ ಶಾಶ್ವತ ನೆಲೆ ಕಲ್ಪಿಸುವ ಪ್ರಸ್ತಾವವನ್ನು ಮುಂದಿಟ್ಟಿದ್ದಾರೆ. 'ಇದಕ್ಕೆ ಕೊಲಂಬಿಯಾದ ಅಧಿಕಾರಿಗಳಿಂದ ಅನುಮತಿ ದೊರಕಿಸಬೇಕು' ಎಂದೂ ವಿನಂತಿಸಿದ್ದಾರೆ.

## ❖ ಒಪೆಕ್ ತೊರೆಯಲು ಯುಎಇ ತೀರ್ಮಾನ

- ಪೆಟ್ರೋಲಿಯಂ ರಫ್ತುದಾರ ದೇಶಗಳ ಒಕ್ಕೂಟಗಳಾದ 'ಒಪೆಕ್' ಹಾಗೂ 'ಒಪೆಕ್+'ನಿಂದ ಹೊರಬರಲು ಯುಎಇ ತೀರ್ಮಾನಿಸಿದ. 'ರಾಷ್ಟ್ರದ ಹಿತಾಸಕ್ತಿಯ ಮೇಲೆ ಗಮನ ನೀಡಲು ಹೀಗೆ ಮಾಡುತ್ತಿರುವುದಾಗಿ ಅದು ತಿಳಿಸಿದೆ.
- 'ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಕಚ್ಚಾ ತೈಲದ ಬೆಲೆಯು ಹೆಚ್ಚಾಗಿರುವ ಸಂದರ್ಭದಲ್ಲಿ ಯುಎಇ ಈ ತೀರ್ಮಾನ ತೆಗೆದುಕೊಂಡಿದೆ.
- ಕಚ್ಚಾ ತೈಲ ಉತ್ಪಾದನೆಗೆ ಕೋಟಾ ನಿಗದಿಪಡಿಸಿದ ಒಪೆಕ್ ಕ್ರಮದ ಬಗ್ಗೆ ಯುಎಇ ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿತ್ತು ಜಾಗತಿಕವಾಗಿ ಕಚ್ಚಾ ತೈಲ ಉತ್ಪಾದಿಸುವ ಪ್ರಮುಖ ದೇಶಗಳಲ್ಲಿ ಯುಎಇ ಕೂಡ ಒಂದು 'ಒಪಕ್' ಹಾಗೂ 'ಒಪೆಕ್+'ನಿಂದ ಹೊರಬರುವ ತೀರ್ಮಾನವು ಶುಕ್ರವಾರದಿಂದ ಜಾರಿಗೆ ಬರಲಿದೆ.
- 'ಒಕ್ಕೂಟದ ಭಾಗವಾಗಿದ್ದಾಗ ನಾವು ಗಣನೀಯ ಕೊಡುಗೆ ನೀಡಿದ್ದೇವೆ, ಎಲ್ಲರ ಒಳಿತಿಗಾಗಿ ದೊಡ್ಡ ತ್ಯಾಗ ಮಾಡಿದ್ದೇವೆ' ಎಂದು ಯುಎಇ ಹೇಳಿದ.

- ಹೊರ್ಮುಜ್ ಜಲಸಂಧಿಯ ಮೂಲಕ ಸರಕು ಸಾಗಣೆ ಸರಿಯಾಗಿ ಆಗುತ್ತಿಲ್ಲ. ಈ ಸಂದರ್ಭದಲ್ಲಿ ಯುಎಇ ತೆಗೆದುಕೊಂಡಿರುವ ಈ ತೀರ್ಮಾನದಿಂದಾಗಿ ತೈಲ ಮಾರುಕಟ್ಟೆಯಲ್ಲಿ ತಕ್ಷಣಕ್ಕೆ ಪರಿಣಾಮ ಕಾಣಲಿಕ್ಕಿಲ್ಲ ಎಂದು ಮಾರು ಕಟ್ಟೆ ತಜ್ಞ ಜಾರ್ಜ್ ಲಿಯೋನ್ ಹೇಳಿದ್ದಾರೆ
- ಇನ್ನು ಮುಂದೆ ಕಚ್ಚಾ ತೈಲ ಉತ್ಪಾದನೆಯನ್ನು ಹೆಚ್ಚು ಮಾಡುವ ಸ್ವಾತಂತ್ರ್ಯ ಯುಎಇಗೆ ಇರಲಿದೆ ಹೀಗಾಗಿ. ಶೈಲ ಮಾರುಕಟ್ಟೆಯಲ್ಲಿ ಸ್ಥಿರತೆ ತರುವ ಪ್ರಮುಖ ದೇಶ ಎಂಬಹೆಗಳಿಕೆ ಸೌದಿ ಅರೇಬಿಯಾ ಪಾಲಿಗೆ ಎಷ್ಟು ದಿನ ಉಳಿಯಲಿದೆ ಎಂಬ ಪ್ರಶ್ನೆ ಮೂಡಲಿದೆ ಎಂದಿದ್ದಾರೆ.

## ❖ '₹64.24 ಲಕ್ಷ ಕೋಟಿ ತಲುಪಿದ ವಿದೇಶಿ ವಿನಿಮಯ ಮೀಸಲು'

- 'ಜಗತ್ತಿನಲ್ಲೇ ಅತಿ ಹೆಚ್ಚು ವಿದೇಶಿ ವಿನಿಮಯ ಮೀಸಲು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದಾಗಿದೆ. ನಮ್ಮ ವಿದೇಶಿ ವಿನಿಮಯ ಮೀಸಲು 700 ಬಿಲಿಯನ್ ಡಾಲರ್ (₹64.24 ಲಕ್ಷ ಕೋಟಿ) ಗಡಿ ದಾಟಿದೆ. 11 ತಿಂಗಳ ಆಮದು ನಿರ್ವಹಣೆಗೆ ಇದು ಸಾಕಾಗಲಿದೆ' ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.
- ನಿಮ್ಮ ಪರಿಗಣಿತ ವಿಶ್ವವಿದ್ಯಾಲಯವು ದೇರಳಕಟ್ಟೆಯಲ್ಲಿ ಮಂಗಳವಾರ ಏರ್ಪಡಿಸಿದ್ದ 'ನಿಮ್ಮ ವಿನಯ ಹೆಗ್ಡೆ ಉಪನ್ಯಾಸ- 2026' ಕಾರ್ಯಕ್ರಮದಲ್ಲಿ ಅವರು 'ವಿಕಸಿತ ಭಾರತ 2047 ರ ದೂರದೃಷ್ಟಿ' ಕುರಿತು ಮಾತನಾಡಿದರು.
- 'ವಿಕಸಿತ ಭಾರತ್ 2047' ಎಂಬುದು ರಾಜಕೀಯ ಘೋಷಣೆ ಅಲ್ಲ ಅದೊಂದು ಜಿಡಿಪಿ ಸಂಖ್ಯೆಯಲ್ಲ ಕಲ್ಯಾಣ ಕರ್ನಾಟಕದ ಕೃಷಿಕರ ಭವಿಷ್ಯಕ್ಕೂ ಅದು ಖಾತರಿ ನೀಡಬಲ್ಲುದು. ರಾಯಚೂರಿನ ಹೆಣ್ಣುಮಗಳು ವಿಜ್ಞಾನಿಆಗುವ ಕನಸು ಕಾಣುವಂತೆ ಮಾಡಬಲ್ಲುದು. ಒಂದು ಕಾಲದಲ್ಲಿ ರೋಮ್ ಜೊತೆ ವ್ಯಾಪಾರ ನಡೆಸಿದ್ದ ಉಡುಪಿ ಕರಾವಳಿಯ ಮೊಗವೀರರಲ್ಲೂ ಕೋಲ್ಡ್ ಸ್ಟೋರೇಜ್ ಸೌಲಭ್ಯ ಪಡೆಯುವ ಭರವಸೆ ಮೂಡಿಸಬಲ್ಲದು. ದಂಡಕಾರಣ್ಯ ಬುಡಕಟ್ಟು ಜನರಿಗೂ ಸಮೃದ್ಧಿಯ ಪಾಲು ಸಿಗಲಿದೆ. ಇದನ್ನು ಸಾಧಿಸಬೇಕಾದರೆ ಅಭಿವೃದ್ಧಿ ವೇಗವನ್ನು ಕಾಯ್ದುಕೊಳ್ಳಬೇಕಿದೆ' ಎಂದರು.
- 'ನಮ್ಮ ದೇಶದ 90 ಕೋಟಿ ಜನರು 35 ವರ್ಷ ವಯಸ್ಸಿನೊಳಗಿನವರು. ಇದು ನಮ್ಮ ಜನಸಂಖ್ಯೆಯ ಶೇ 65ರಷ್ಟು ಮಾನವ ಪ್ರಭೇದದ ಇತಿಹಾಸದಲ್ಲೇ ಅತಿಹೆಚ್ಚು ಯುವಶಕ್ತಿಯ ಪ್ರಮಾಣವಿದು ಈ ಯುವಜನರಲ್ಲಿ ಮಹತ್ವಾಕಾಂಕ್ಷೆ ಇದೆ. ಹೃದಯವಂತಿಕೆ ಜೊತೆ ಬುದ್ಧಿವಂತಿಕೆಯೂ ಇದೆ. ಬಲಿಷ್ಠ ಭಾರತದ ಅನುಕೂಲಗಳ ಸ್ಪಷ್ಟ ಕಲ್ಪನೆ ಅವರಿಗಿದೆ' ಎಂದರು.

## ❖ ಶಿಕ್ಷಣ ಹಕ್ಕು ಕಾಯ್ದೆ ರಾಷ್ಟ್ರೀಯ ಯೋಜನೆಯಾಗಿ ಪರಿಗಣಿಸುವಂತೆ ಸೂಚನೆ :ಕಡ್ಡಾಯ ಪ್ರವೇಶಾತಿ ಎತ್ತಿಹಿಡಿದ 'ಸುಪ್ರೀಂ'

- ಬಡವರು ಹಾಗೂ ದುರ್ಬಲ ವರ್ಗದ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಜಾರಿಗೆ ತಂದಿರುವ ಶಿಕ್ಷಣ ಹಕ್ಕು ಕಾಯ್ದೆಯಡಿ (ಆರ್‌ಟಿಇ) ಮಕ್ಕಳ ಕಡ್ಡಾಯ ಪ್ರವೇಶವನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್ ಪೂರ್ವ ಪ್ರಾಥಮಿಕ ಶಾಲೆಗೆ ಮಕ್ಕಳ ಸೇರ್ಪಡೆಯನ್ನು 'ರಾಷ್ಟ್ರೀಯ ಯೋಜನೆ'ಯಾಗಿ ಪರಿಗಣಿಸಬೇಕು ಎಂದು ಹೇಳಿದೆ.
- ರಾಜ್ಯ ಸರ್ಕಾರದ ಮೂಲಕ ಹಂಚಿಕೆಯಾದ ಮಕ್ಕಳಿಗೆ ಆರ್‌ಟಿಇ ಅಡಿ ಪೂರ್ವ ಪ್ರಾಥಮಿಕ ತರಗತಿಗಳಿಗೆ ಯಾವುದೇ ವಿಳಂಬವಿಲ್ಲದ ಪ್ರವೇಶಾತಿ ಕಲ್ಪಿಸಲು 'ನೆರೆಯ ಶಾಲೆ'ಗಳು ಸಾಂವಿಧಾನಿಕವಾಗಿ ಬದ್ಧವಾಗಿವೆ ಎಂದು ತೀರ್ಪು ನೀಡಿದೆ.
- ಮಕ್ಕಳಿಗೆ ಪ್ರವೇಶ ನಿರಾಕರಿಸುವುದು ಸಂವಿಧಾನದ 21 (ಎ) ವಿಧಿ ಅಡಿಯಲ್ಲಿ ಖಾತರಿ ಪಡಿಸಲಾದ ಶಿಕ್ಷಣದ ಮೂಲಭೂತ ಹಕ್ಕನ್ನು ದುರ್ಬಲಗೊಳಿಸುತ್ತದೆ ಎಂದು ನ್ಯಾಯಮೂರ್ತಿಗಳಾದ ಪಿ.ಎಸ್ ನರಸಿಂಹ ಮತ್ತು ಅಲೋಕ್ ಆರಾಧೆ ಅವರ ಪೀಠ ಹೇಳಿತು.
- 2009ರ ಆರ್‌ಟಿಇ ಕಾಯ್ದೆಯ ಸೆಕ್ಷನ್ 12ರ ಅಡಿಯಲ್ಲಿ 'ನೆರೆಯ ಶಾಲೆಗಳು ಸಮಾಜದ ಬಡ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಶೇಕಡ 25ರಷ್ಟು ಸೀಟುಗಳನ್ನು ಮೀಸಲಿಡ ಬೇಕು ಈ ನಿಯಮವು ನಮ್ಮ ಸಮಾಜದಲ್ಲಿ ಬದಲಾವಣೆ ತರುವ ಅಸಾಧಾರಣ ಸಾಮರ್ಥ್ಯವನ್ನು ಹೊಂದಿದೆ' ಎಂದು ಪೀಠ ಅಭಿಪ್ರಾಯ ಪಟ್ಟಿತು

Dr. Rajkumar IAS/KAS Academy

- 'ಅಂತಹ ವಿದ್ಯಾರ್ಥಿಗಳ ಪ್ರವೇಶ ವನ್ನು ಖಾತರಿಪಡಿಸಿಕೊಳ್ಳುವುದು ಸರ್ಕಾರ, ಸ್ಥಳೀಯ ಪ್ರಾಧಿಕಾರದ ಬಾಧ್ಯತೆಯಾಗಿರಬೇಕು ಶಿಕ್ಷಣ ಹಕ್ಕಿನ ನಿರಾಕರಣೆ ಕುರಿತ ದೂರಿನೊಂದಿಗೆ ಬರುವ ಪೋಷಕರಿಗೆ ಪರಿಹಾರವನ್ನು ಒದಗಿಸಲು ಕೋರ್ಟ್‌ಗಳು ಹೆಚ್ಚು ಆಸಕ್ತಿ ವಹಿಸ ಬೇಕು' ಎಂದು ತೀರ್ಪನ್ನು ಬರೆದ ನ್ಯಾಯಮೂರ್ತಿ ನರಸಿಂಹ ಹೇಳಿದರು.
- ಸಮಾಜದ ದುರ್ಬಲ ವರ್ಗದ ವಿದ್ಯಾರ್ಥಿಗೆ ಪ್ರವೇಶ ನೀಡುವಂತೆ ನಿರ್ದೇಶಿಸಿದ ಹೈಕೋರ್ಟ್ ಆದೇಶ ವನ್ನು ಪ್ರಶ್ನಿಸಿ, ಲಖನೌ ಪಬ್ಲಿಕ್ ಸ್ಕೂಲ್ ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠ ವಜಾಗೊಳಿಸಿತು.
- 2024-25ರ ಶೈಕ್ಷಣಿಕ ವರ್ಷದಲ್ಲಿ ಉತ್ತರ ಪ್ರದೇಶ ಸರ್ಕಾರ ಹಂಚಿಕೆ ಮಾಡಿದ ವಿದ್ಯಾರ್ಥಿಯನ್ನು ಸೇರಿಸಿ ಕೊಳ್ಳಲು ಲಖನೌ ಪಬ್ಲಿಕ್ ಸ್ಕೂಲ್ ನಿರಾಕರಿಸಿತ್ತು ವಿದ್ಯಾರ್ಥಿಯ ಪೋಷಕರು ಹೈಕೋರ್ಟ್ ಮೊರೆ ಹೋಗಿದ್ದರು ಹೈಕೋರ್ಟ್ ವಿದ್ಯಾರ್ಥಿಯ ಪರ ತೀರ್ಪು ನೀಡಿತ್ತು ಶಾಲೆಯ ಆಡಳಿತ ಮಂಡಳಿ ಈ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೇಲ್ಮನವಿ ಸಲ್ಲಿಸಿತ್ತು.

## ❖ ಬ್ಯಾಂಕಿಂಗ್: ನಾಲ್ಕನೇ ಸ್ಥಾನಕ್ಕೆ ದೀಪ್ತಿ

- ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಭಾರತದ ದೀಪ್ತಿ ಶರ್ಮಾ ಅವರು ಐಸಿಸಿ ಮಹಿಳಾ ಟಿ20 ಬೌಲರ್ಗಳ ಬ್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಆಲ್ರೌಂಡರ್ಗಳ ವಿಭಾಗದಲ್ಲಿ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಅವರು 5 ಪಂದ್ಯಗಳ ಸರಣಿಯಲ್ಲಿ 7 ವಿಕೆಟ್ ಗಳಿಸಿದ್ದರು. ನಾಲ್ಕನೇ ಪಂದ್ಯದಲ್ಲಿ ಐದು ವಿಕೆಟ್ ಪಡೆದು ಮಿಂಚಿದ್ದರು.
- ಐಸಿಸಿ ಮಂಗಳವಾರ ಪ್ರಕಟಿಸಿರುವ ರಾಂಕಿಂಗ್ ಪಟ್ಟಿಯಲ್ಲಿ. ಉಪನಾಯಕಿ ಸ್ಮೃತಿ ಮಂದಾನ ಅವರು ಬ್ಯಾಟರ್ಗಳ ವಿಭಾಗದಲ್ಲಿ ಒಂದು ಸ್ಥಾನ ಹಿಂಬಡ್ತಿ ಯೊಂದಿಗೆ ಐದನೇ ಕ್ರಮಾಂಕ ಪಡೆದಿ ದ್ದಾರೆ. ಅವರು ಸರಣಿಯ ಮೊದಲ ಮೂರು ಪಂದ್ಯಗಳಿಂದ 62 ರನ್ ಸಂಪಾದಿಸಿದ್ದರು. ನಾಲ್ಕು ಮತ್ತು ಐದನೇ ಪಂದ್ಯದಲ್ಲಿ ಕಣಕ್ಕಿಳಿದಿರಲಿಲ್ಲ.
- ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೋಲ್ವಾರ್ಟ್ ಅವರು (786 ಅಂಕ) ಮೂರನೇ ಸ್ಥಾನಕ್ಕೇರಿದ್ದಾರೆ. ಆಸ್ಟ್ರೇಲಿಯಾದ ಜಾರ್ಜಿಯಾ ವೋಲ್ (815) ಹಾಗೂ ಬೆತ್ ಮೂನಿ (788) ಮೊದಲೆರಡು ಸ್ಥಾನದಲ್ಲಿದ್ದಾರೆ ಭಾರತ ತಂಡದ ನಾಯಕಿ ಹರ್ಮನ್ಪ್ರೀತ್ ಕೌರ್ ಅವರು ಅಗ್ರ 10ರಲ್ಲಿ (10ನೇ ಕ್ರಮಾಂಕ) ಮರಳಿ ಸ್ಥಾನಪಡೆದಿದ್ದಾರೆ.
- ವೋಲ್ವಾರ್ಟ್ ಅವರು ಒಂದು ಶತಕವೂ ಸೇರಿ ಸರಣಿಯಲ್ಲಿ 330 ರನ್ ಗಳಿಸಿದ್ದರು. ಇದು, ಮಹಿಳಾ ತಂಡಗಳ ದ್ವಿಪಕ್ಷೀಯ ಸರಣಿಯಲ್ಲಿ ಬ್ಯಾಟರ್ವೊಬ್ಬರು ಗಳಿಸಿದ ಅತಿ ಹೆಚ್ಚಿನ ರನ್.

## ❖ 4 ಚಿನ್ನ ಗೆದ್ದ ಭಾರತದ ವೇಟ್ಲಿಫ್ಟರ್‌ಗಳು

- ಭಾರತ ತಂಡದ ಸ್ಪರ್ಧಿಗಳು, ಸಮೋವಾದ ಅಪಿಯಾದಲ್ಲಿ ನಡೆಯುತ್ತಿರುವ ಕಾಮನ್ವೆಲ್ತ್ ಯುವ ಮತ್ತು ಜೂನಿಯರ್ ವೇಟ್ಲಿಫ್ಟಿಂಗ್ ಚಾಂಪಿಯನ್ಶಿಪ್ ಮತ್ತು ಜೊತೆಯಲ್ಲೇ ನಡೆಯುತ್ತಿರುವ ಯುನಿವರ್ಸಲ್ ಕಪ್ (ಸೀನಿಯರ್) ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದು, ಎರಡನೇ ದಿನ 4 ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ.
- ಪುರುಷರ 65 ಕೆ.ಜಿ. ವಿಭಾಗದಲ್ಲಿ ಸುನಿಲ್ ಸಿಂಗ್ ಒಟ್ಟು 271 ಕೆ.ಜಿ. ತೂಕ ಎತ್ತಿ (ಸ್ನಾಚ್ ನಲ್ಲಿ 126 ಕೆ.ಜಿ ಮತ್ತು ಕ್ಲೀನ್ ಮತ್ತು ಜರ್ಕ್ನಲ್ಲಿ 145 ಕೆ ಜಿ) ಸ್ವರ್ಣ ಜಯಿಸಿದರು
- ಮಹಿಳೆಯರ 58 ಕೆ ಜಿ ವಿಭಾಗದಲ್ಲಿ ಇಸಾಂಗ್ವಾ ಗೊಗೊಯಿ ಮತ್ತು ಪುರುಷರ 71 ಕೆ.ಜಿ ವಿಭಾಗದಲ್ಲಿ ಅಭಿನವ್ ಗೊಗೊಯಿ ಸ್ವರ್ಣಪದಕ ಗಳನ್ನು ಕೊರಳಿಗೇರಿಸಿಕೊಂಡರು ಯಿಸಾಂಗ್ವಾ ಒಟ್ಟು 185 ಕೆ.ಜಿ (ಸ್ನಾಚ್ ನಲ್ಲಿ 79 ಕೆ. ಜಿ, ಕ್ಲಿನ್ ಮತ್ತು ಜರ್ಕ್ನಲ್ಲಿ 106 ಕೆ ಜಿ) ತೂಕ ಎತ್ತಿದರೆ, ಅಭಿನವ್ ಒಟ್ಟು 284 ಕೆ ಜಿ (ಸ್ನಾಚ್ 129 ಕೆ ಜಿ ನ್ ಮತ್ತು ಜರ್ಕ್ 155 ಕೆ ಜಿ) ಭಾರ ಎತ್ತಿದರು.
- ಯುನಿವರ್ಸಲ್ ಕಪ್ನಲ್ಲಿ ಚಾರು ಪೆಸಿ ಪುರುಷರ 65 ಕೆ ಜಿ ಸ್ಪರ್ಧೆಯಲ್ಲಿ 289 ಕೆ ಜಿ (ಸ್ನಾಚ್ 127 ಕೆ ಜಿ ಕ್ಲೀನ್ ಮತ್ತು ಜರ್ಕ್ 162 ಕೆ ಜಿ) ಎತ್ತಿ ಅಗ್ರಸ್ಥಾನ ಪಡೆದರು.

Dr. Rajkumar IAS/KAS Academy

## ❖ ಎಸ್.ಸಡಗೋಪನ್ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖ: 'ಶೇ 17ಎಂಜಿನಿಯರ್ಗಳಿಗಷ್ಟೇ ಕೆಲಸ"

- ರಾಜ್ಯದಲ್ಲಿ ಪ್ರತಿ ವರ್ಷ ಎಂಜಿನಿಯರಿಂಗ್ ಪದವಿ ಪೂರೈಸುತ್ತಿರುವ 1.30 ಲಕ್ಷ ವಿದ್ಯಾರ್ಥಿಗಳಲ್ಲಿ ಶೇ 17ರಷ್ಟು ಮಂದಿಗಷ್ಟೇ ಉದ್ಯೋಗ ಸಿಗುತ್ತಿದೆ ಎಂದು ಎಸ್.ಸಡಗೋಪನ್ ಸಮಿತಿ ವರದಿ ಹೇಳಿದೆ.
- ತಾಂತ್ರಿಕ ಶಿಕ್ಷಣ ಸುಧಾರಣೆಗಾಗಿ ರಚಿಸಲಾಗಿದ್ದ ಎಸ್.ಸಡಗೋಪನ್ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯ 'ಕರ್ನಾಟಕದ ಎಂಜಿನಿಯರಿಂಗ್ ಪ್ರತಿಭಾ ಯೋಜನೆಯ ಮರು ಸಮತೋಲನಾ ವರದಿ' ಬಿಡುಗಡೆ ಮಾಡಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಈ ವಿಷಯ ತಿಳಿಸಿದರು.
- 'ಎಂಜಿನಿಯರಿಂಗ್ ಪದವಿಗೆ ದಾಖಲಾಗುವ ವಿದ್ಯಾರ್ಥಿಗಳಲ್ಲಿ ಶೇ 62 ಮಂದಿ ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿಸಿದ ಕೋರ್ಸ್ಗಳಿಗೆ ಸೇರ್ಪಡೆಯಾಗಿದ್ದಾರೆ. ಸಿವಿಲ್, ಮೆಕ್ಯಾನಿಕಲ್, ಆಟೊಮೊಬೈಲ್ ಸೇರಿದಂತೆ ನಾಗರಿಕ ಸೇವಾ ಕ್ಷೇತ್ರದ ಸೇವೆ ಬಯಸುವ ಎಂಜಿನಿಯರಿಂಗ್ ವಿಷಯಗಳಿಗೆ ಶೇ 16ರಷ್ಟು ದಾಖಲಾತಿ ಆಗುತ್ತಿವೆ. 2020ಕ್ಕೆ ಹೋಲಿಸಿದರೆ ಶೇ 29ರಷ್ಟು ಕುಸಿತವಾಗಿದೆ. ಅದಕ್ಕಾಗಿ ಕಂಪ್ಯೂಟರ್ ಕೋರ್ಸ್ಗಳ ಸೀಟುಗಳಿಗೆ ನಿಯಂತ್ರಣ ಹಾಕಲಾಗುವುದು' ಎಂದರು.
- 'ತೆಲಂಗಾಣ ಸರ್ಕಾರದ ಸುಧಾರಣೆಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿ ವರದಿ ನೀಡಿದೆ. ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ಐದು ಕೋರ್ಸ್ಗಳಿಗೆ ಪ್ರತಿ ವರ್ಷ ಶೇ 17ರಷ್ಟು ಸೀಟು ಕಡಿತ ಮಾಡಬೇಕು. 900 ಸೀಟುಗಳ ಮಿತಿ ಹಾಕಬೇಕು ಎಂದು ಸಮಿತಿ ಹೇಳಿದ ಕೋರ್ಸ್ಗಳ ಸೀಟುಗಳನ್ನು ಸರ್ಕಾರದ ಆದೇಶದ ನಂತರವೇ ನಿಯಂತ್ರಿಸಲಾಗುವುದು. ವರದಿಯನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು. ಆದೇಶ ನಂತರ ಸೀಟು ಹೆಚ್ಚಳಕ್ಕೆ ಬೇಡಿಕೆ ಸಲ್ಲಿಸುವ ಕಾಲೇಜುಗಳಿಗೆ ಹೊಸ ನಿಯಮ ಅನ್ವಯವಾಗಲಿದೆ. ಈಗಾಗಲೇ ಹೆಚ್ಚಳವಾದ ಸೀಟುಗಳಲ್ಲಿ ವ್ಯತ್ಯಯ ಆಗುವುದಿಲ್ಲ' ಎಂದು ಹೇಳಿದರು.
- ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು, ಖಾಸಗಿ ವಿಶ್ವವಿದ್ಯಾಲಯಗಳು ಆದೇಶ ಜಾರಿಗೆ ಬಂದ ಎರಡು ವರ್ಷಗಳ ಒಳಗೆ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್ಬಿಎ) ಪ್ರಮಾಣಪತ್ರ ಪಡೆಯುವುದು ಕಡ್ಡಾಯ ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಇದು ಅಗತ್ಯ ಆದೇಶಕ್ಕೂ ಮೊದಲು ಹೆಚ್ಚುವರಿ ಸೀಟು ಪಡೆದವರಿಗೂ ಈ ನಿಯಮ ಅನ್ವಯವಾಗಲಿದೆ ಎಂದರು.

### ಕೆಇಇಆರ್ಎ ಸ್ಥಾಪನೆಗೆ ಕ್ರಮ

- ಎಂಜಿನಿಯರಿಂಗ್ ಶಿಕ್ಷಣದಲ್ಲಿ ಮೂಲಭೂತ ಬದಲಾವಣೆ ತರಲು ಕರ್ನಾಟಕ ಎಂಜಿನಿಯರಿಂಗ್ ಶಿಕ್ಷಣ ಸುಧಾರಣಾ ಪ್ರಾಧಿಕಾರ (ಕೆಇಇಆರ್ಎ) ಸ್ಥಾಪನೆಗೆ ಸಮಿತಿ ಶಿಫಾರಸು ಮಾಡಿದೆ. ಅದಕ್ಕಾಗಿ ಕಾನೂನು ತರಬೇಕಿದೆ. ಈ ಕುರಿತು ಚರ್ಚಿಸಿ, ಶೀಘ್ರ ನಿರ್ಧಾರ ಕೈಗೊಳ್ಳುತ್ತೇವೆ ಎಂದು ಸುಧಾಕರ್ ಹೇಳಿದರು.
- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಸ್ವಾಯತ್ತ ಕಾಲೇಜುಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ಪಠ್ಯಕ್ರಮ ಸುಧಾರಣೆಯನ್ನು ಸಂಯೋಜಿಸುವುದರ ಜತೆಗೆ, ಕೈಗಾರಿಕಾ ಸಹಭಾಗಿತ್ವ ಹಾಗೂ ಮೂಲಸೌಕರ್ಯ ವ್ಯವಸ್ಥೆಗಳನ್ನು ಸಮನ್ವಯಗೊಳಿಸಿ, ಕರ್ನಾಟಕ ಎಂಜಿನಿಯರಿಂಗ್ ಶಿಕ್ಷಣ ಡೇಟಾ ವ್ಯವಸ್ಥೆಯ ಮೂಲಕ ಫಲಿತಾಂಶಗಳನ್ನು ಪರಿಶೀಲಿಸುವ ಹೊಣೆ ಹೊರುತ್ತದೆ ಎಂದರು.

### ಖಾಸಗಿ ವಿ.ವಿಗಳಿಗೂ ನಿಯಂತ್ರಣ: ಸಚಿವ

- ಸ್ವಾಯತ್ತ ಹೆಸರಿನಲ್ಲಿ ತಮಗೆ ಬೇಕಾದಂತೆ ಕಾರ್ಯನಿರ್ವಹಿಸುವ ಖಾಸಗಿ ವಿಶ್ವವಿದ್ಯಾಲಯಗಳ ನಿಯಂತ್ರಣಕ್ಕೆ ಚಿಂತನೆ ನಡೆದಿದ್ದು, ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಸುಧಾಕರ್ ಹೇಳಿದರು.
- 'ಕೆಲ ಖಾಸಗಿ ವಿಶ್ವವಿದ್ಯಾಲಯಗಳು ಯುಜಿಸಿ ನೀಡಿದ ಸ್ವಾಯತ್ತೆ ನೆಪದಲ್ಲಿ ಸರ್ಕಾರದ ಅನುಮತಿ ಪಡೆಯದೆ ಸೀಟು ಹೆಚ್ಚಿಸಲು ಯತ್ನಿಸಿವೆ. ಯಾವುದೇ ವಿಶ್ವವಿದ್ಯಾಲಯ ಸ್ವಾಯತ್ತೆ ಹಸರಿನಲ್ಲಿ ನಿಯಮಗಳಿಂದ ತಪ್ಪಿಸಿಕೊಳ್ಳಲು ಅವಕಾಶ ಇಲ್ಲ. ಈಗಾಗಲೇ ಒಂದು ಪ್ರಮುಖ ವಿಶ್ವವಿದ್ಯಾಲಯಕ್ಕೆ ಈ ಕುರಿತು ಎಚ್ಚರಿಕೆ ನೀಡಿದ್ದೇವೆ' ಎಂದರು.

Dr. Rajkumar IAS KAS Academy

- ಅಗತ್ಯ ಮೂಲಸೌಕರ್ಯ ಮತ್ತು ಮಾನದಂಡಗಳನ್ನು ಪೂರೈಸಿದ ಸಂಸ್ಥೆಗಳಿಗೆ ಡೀಮ್ಸ್ ವಿಶ್ವವಿದ್ಯಾಲಯದ ಸ್ಥಾನಕ್ಕಾಗಿನ ನಿರಾಕ್ಷೇಪಣಾ ಪತ್ರ ಪಡೆಯಲು ಅನುಮತಿ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

## ❖ ಕಾಗದರಹಿತ ಆಸ್ತಿ ನೋಂದಣಿಗೆ ಚಾಲನೆ: ರಾಜ್ಯದಲ್ಲಿ ಮೊದಲ ಬಾರಿಗೆ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ

- ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಆಸ್ತಿಗಳ ಕಾಗದರಹಿತ ದಸ್ತಾವೇಜು ನೋಂದಣಿ ಪ್ರಕ್ರಿಯೆಗೆ ನೋಂದಣಿ ಮತ್ತು ಮುಂದ್ರಾಂಕ ಇಲಾಖೆಯ ಆಯುಕ್ತ ಮುಲ್ಲೆ ಮುಗಿಲನ್ ಗುರುವಾರ ಇಲ್ಲಿನ ಜಿಲ್ಲಾ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಚಾಲನೆ ನೀಡಿದರು.
- 'ರಾಜ್ಯದಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಜಿಲ್ಲೆಯಲ್ಲಿ ಈ ವ್ಯವಸ್ಥೆ ಅನುಷ್ಠಾನಗೊಂಡಿದ್ದು, ಸಾಧಕ-ಬಾಧಕಗಳನ್ನು ಅರಿತು ರಾಜ್ಯದಾದ್ಯಂತ ವಿಸ್ತರಿಸಲಾಗುವುದು' ಎಂದು ತಿಳಿಸಿದರು.
- '2023ರಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಬಳಕೆಯಲ್ಲಿರುವ ಕಾವೇರಿ 2.0 ತಂತ್ರಾಂಶವನ್ನು ಕಾಗದ ರಹಿತ ನೋಂದಣಿ ವ್ಯವಸ್ಥೆಗೆ ಅನುಗುಣವಾಗಿ ಅಪ್ಡೇಟ್ ಮಾಡಲಾಗಿದೆ. ಸಾರ್ವಜನಿಕರ ಆಸ್ತಿಗಳಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳ ಸೃಷ್ಟಿಗೆ ಹಾಗೂ ನೋಂದಣಿಗೆ ಸಂಪೂರ್ಣ ಕಡಿವಾಣ ಬೀಳಲಿದೆ' ಎಂದು ಮಾಹಿತಿ ನೀಡಿದರು.
- ಇನ್ನು ಮುಂದೆ ಸಾರ್ವಜನಿಕರ ಆಸ್ತಿಗಳ ದಾಖಲೆಗಳು ಭೌತಿಕವಾಗಿರದೆ ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿರುತ್ತವೆ. ಸಾಲ ಪಡೆಯಲು ಅಥವಾ ವ್ಯವಹಾರಗಳಿಗೆ ಬ್ಯಾಂಕ್ ಅಥವಾ ಇತರ ಸಂಸ್ಥೆಗಳಿಗೆ ಭೌತಿಕ ದಾಖಲೆಸಲ್ಲಿಸುವ ಅಗತ್ಯ ಇರುವುದಿಲ್ಲ. ಸಂಬಂಧಪಟ್ಟ ಸಂಸ್ಥೆಗಳು ನೇರವಾಗಿ ಡಿಜಿಟಲ್ ಲೈಬ್ರರಿಯಿಂದ ದಾಖಲೆ ಪಡೆಯಲು ಅವಕಾಶ ನೀಡಲಾಗುವುದು ಎಂದರು.
- 'ಆನ್ಲೈನ್ನಲ್ಲಿ ತ್ವರಿತ ಹಾಗೂ ಸುಲಭವಾಗಿ ದಾಖಲೆಗಳನ್ನು ಪಡೆಯಬಹುದು ಎಲ್ಲವೂ ಪಾರದರ್ಶಕವಾಗಿರಲಿದೆ' ಎಂದು ಮುಲ್ಲೈ ಮುಗಿಲನ್ ತಿಳಿಸಿದರು.
- ಬಿಡದಿಯಲ್ಲಿ ಸ್ಥಾಪನೆಯಾಗಲಿದೆ 'ವರ್ಕ್-ಲಿವ್-ಪ್ಲೇ' ಪರಿಕಲ್ಪನೆಯ ಉಪನಗರ , ಸಚಿವ ಸಂಪುಟ ಅನುಮೋದನೆ

## ❖ "ಎಐಸಿಟಿ'ಗೆ ₹18,133 ಕೋಟಿ

- ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯಡಿ ಬಿಡದಿಯಲ್ಲಿ ₹18,133 ಕೋಟಿ ವೆಚ್ಚದಲ್ಲಿ ಎಐ ಸಿಟಿ' ಅಥವಾ 'ವರ್ಕ್-ಲಿವ್-ಪ್ಲೇ' ಎಂಬ ಉಪ ನಗರ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.
- ಸಚಿವ ಸಂಪುಟ ಸಭೆಯಲ್ಲಿ ಯೋಜನೆಗೆ ಅನುಮೋದನೆ ನೀಡಲಾಗಿದೆ. ಯೋಜನೆಗೆ ಅಗತ್ಯವಿರುವ ಯೋಜನೆ ನಿರ್ವಹಣಾ ಸಮಾಲೋಚಕ ಸಂಸ್ಥೆಯನ್ನು ನೇಮಿಸಿಕೊಳ್ಳಲು ತಾತ್ವಿಕ ಒಪ್ಪಿಗೆ ನೀಡಲಾಗಿದೆ.
- ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಯೋಜನೆಯ ವಿವರ ನೀಡಿದರು.
- ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮೂಲ ಸೌಕರ್ಯದ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಮತ್ತು ಸಮತೋಲಿತ ನಗರ ಬೆಳವಣಿಗೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ 'ವರ್ಕ್-ಲಿವ್-ಪ್ಲೇ ಪರಿಕಲ್ಪನೆಯಡಿ ಉಪನಗರಗಳನ್ನು ನಿರ್ಮಿಸಲಾಗು ವುದು. ಕೈಗಾರಿಕೆ, ವಾಣಿಜ್ಯ ಮತ್ತು ವಸತಿ ಸಮುಚ್ಚಯಗಳನ್ನು ಇದು ಒಳಗೊಂಡಿರುತ್ತದೆ. ಇದರ ಅನುಷ್ಠಾನ ದಿಂದ ಜನಸಂಖ್ಯೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಯೋಜಿತವಾಗಿ ಪರ್ಯಾಯ ನಗರ ಪ್ರದೇಶಗಳಿಗೆ ವಿಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಇದರಿಂದ ಸಂಚಾರ ದಟ್ಟಣೆ, ವಾಯು ಮತ್ತು ಶಬ್ದ ಮಾಲಿನ್ಯ ತಡೆಗಟ್ಟಲು ಸಹಾಯವಾಗುತ್ತದೆ ಎಂದು ಹೇಳಿದರು.
- ಈ ಯೋಜನೆಗೆ 7,481 ಎಕರೆ 22 ಗುಂಟೆ ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಅಧಿಸೂಚನೆ ಹೊರಡಿಸಲಾಗಿದೆ. ಭೂಮಾಲೀಕರಿಗೆ 2013ರ ಭೂಸ್ವಾಧೀನ, ಪುನರ್ವಸತಿ ಕಾಯ್ದೆ ಅನ್ವಯ ನಗದು ಪರಿಹಾರ ಅಥವಾ ಕರ್ನಾಟಕ ನಗರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2009ರ ನಿಯಮ 3ರ ಅನ್ವಯ

ಭೂಸ್ವಾಧೀನಗೊಂಡ ಪ್ರತಿ ಎಕರೆಗೆ 9,693 ಚದರ ಅಡಿ ಅಭಿವೃದ್ಧಿಪಡಿಸಿ ವಸತಿ ನಿವೇಶನ ಪರಿಹಾರವಾಗಿ ನೀಡಲಾಗುವುದು ಎಂದು ಪಾಟೀಲ ಹೇಳಿದರು.

- ಈ ಯೋಜನೆಯ ಯೋಜನಾ ವೆಚ್ಚಗಳಿಗಾಗಿ ಹುಡ್ಕೊ ಸಂಸ್ಥೆಯಿಂದ ₹9,011 ಕೋಟಿ ಸಾಲ ಪಡೆಯಲು ಮತ್ತು ಅದಕ್ಕೆ ತಗಲುವ ಬಡ್ಡಿ ಮೊತ್ತಕ್ಕೆ ಸರ್ಕಾರ ಗ್ಯಾರಂಟಿ ನೀಡಲಿದೆ. ಬಿಎಂಆರ್ಡಿಎ ವ್ಯಾಪ್ತಿಯಲ್ಲಿನ ಪ್ರಾಧಿಕಾರಗಳ ಸ್ವತ್ತುಗಳ ಸೂಕ್ತ ನಗದೀಕರಣ ಅಂದರೆ ಅಡಮಾನ ಮೂಲಕ ಬ್ಯಾಂಕುಗಳಿಂದ ₹3,650 ಕೋಟಿ ಸಾಲ ಪಡೆಯಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.
- **ಯೋಜನಾ ವೆಚ್ಚ:** ಭೂಸ್ವಾಧೀನ ವೆಚ್ಚಕ್ಕೆ ₹9,081 ಕೋಟಿ, ಅಭಿವೃದ್ಧಿ ವೆಚ್ಚ ₹6,580 ಕೋಟಿ, ನಿರ್ಮಾಣದ ವೇಳೆಯ ಬಡ್ಡಿ ₹2,472 ಕೋಟಿ. ಹೀಗೆ ಒಟ್ಟು ₹18,133 ಕೋಟಿ ಆಗಲಿದೆ ಎಂದರು.
- ಗ್ರಾಮಗಳ ವ್ಯಾಪ್ತಿ ಬಿಡದಿ ಹೋಬಳಿಯ ಬೈರಮಂಗಲ, ಬನ್ನಿಗಿರಿ, ಹೊಸೂರು, ಕೆ.ಜಿ.ಗೊಲ್ಲರಹಳ್ಳಿ, ಕಂಚುಗಾರನಹಳ್ಳಿ, ಅರಳಾಳುಸಂದ್ರ, ಕೆಂಪಯ್ಯನಪಾಳ್ಯ, ಕಂಚುಗಾರನಹಳ್ಳಿ ಕಾವಲು, ಮಂಡಲಹಳ್ಳಿ, ಹಾರೋಹಳ್ಳಿ ತಾಲ್ಲೂಕಿನ ವಡೇರಹಳ್ಳಿ ಭಾಗಶಃ ಗ್ರಾಮಗಳು ಸೇರಿವೆ.
- **ವಸತಿ ಯೋಜನೆ:** ಈ ಯೋಜನೆಯಲ್ಲಿ 1,800 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ಮತ್ತು 5,681 ಎಕರೆ ಪ್ರದೇಶದಲ್ಲಿ ಬೃಹತ್ ಏಕ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುವುದು. ಏಕ ನಿವೇಶನಗಳಲ್ಲಿ ಬಹುಮಹಡಿ ಕಟ್ಟಡ ನಿರ್ಮಿಸಲಾಗುವುದು. ಈ ಬಹುಮಹಡಿ ಕಟ್ಟಡಗಳಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಲಾಗುವುದು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

## ❖ ಹೈದರಾಬಾದ್-ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್

- ಹೈದರಾಬಾದ್-ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದು ಕೇಂದ್ರ ಸರ್ಕಾರ ಯೋಜನೆಯಾಗಿದ್ದು, ರಾಜ್ಯದಲ್ಲಿ ಒಟ್ಟು 3 ನಿಲ್ದಾಣಗಳೆಂದರೆ ಅಲಿಪುರ, ದೇವನಹಳ್ಳಿ ಮತ್ತು ಕೋಡಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಕಾರಿಡಾರ್ನ ಒಟ್ಟು ಉದ್ದ 607.03 ಕಿ.ಮೀ ಇದ್ದು ಕರ್ನಾಟಕದಲ್ಲಿ ತುಮಕೂರು, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 101.03 ಕಿ.ಮೀ ಇರುತ್ತದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.
- ದೇವನಹಳ್ಳಿಯ ಪ್ರಸ್ತಾವಿತ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರವೇಶಕ್ಕೆ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಆಗುತ್ತದೆ. ಅಲ್ಲದೇ, ಬೆಂಗಳೂರು ಉಪನಗರ ರೈಲು ಮತ್ತು ಮೆಟ್ರೊ ರೈಲು ಯೋಜನೆ ವ್ಯವಸ್ಥೆಯೊಂದಿಗೆ ಸಂಯೋಜಿಸಲಾಗುತ್ತದೆ. ಮಲ್ಟಿ ಮೋಡಲ್ ಸಂಪರ್ಕವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ವಿವರಿಸಿದರು.

## ರಾಜ್ಯ ಶಿಕ್ಷಣ ನೀತಿ ಚರ್ಚೆ

- 'ಸುಖದೇವ್ ತೋರಟ್ ಅಧ್ಯಕ್ಷತೆಯ ಸಮಿತಿ ಸಲ್ಲಿಸಿರುವ 'ರಾಜ್ಯ ಶಿಕ್ಷಣ ನೀತಿ'ಯನ್ನು ಸಂಪುಟ ಸಭೆಯಲ್ಲಿ ಮಂಡಿಸಲಾಯಿತು. ಆ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಇನ್ನೂ ಹೆಚ್ಚಿನ ಚರ್ಚೆ ನಡೆಸಲು ಅಧಿಕಾರಿಗಳಿಂದ ಮಾಹಿತಿಯನ್ನು ಕೇಳಲಾಗಿದೆ. ಇದಕ್ಕಾಗಿ ಪ್ರತ್ಯೇಕ ಸಭೆಯನ್ನು ಶೀಘ್ರವೇ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು' ಎಂದು ಎಚ್. ಕೆ.ಪಾಟೀಲ ತಿಳಿಸಿದರು.

## ಅಲ್ಪಸಂಖ್ಯಾತರ ಕಾಲೋನಿ ಅಭಿವೃದ್ಧಿಗೆ ₹600 ಕೋಟಿ

- ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಅತಿ ಹಿಂದುಳಿದ ಅಲ್ಪ ಸಂಖ್ಯಾತರು ವಾಸಿಸುತ್ತಿರುವ ಅತಿ ಹಿಂದುಳಿದ ಕಾಲೋನಿ ಗಳನ್ನು ಮಾದರಿ ಕಾಲೋನಿಗಳನ್ನಾಗಿ ಅಭಿವೃದ್ಧಿಪಡಿಸಲು ₹600 ಕೋಟಿಗಳ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲು ಸಂಪುಟ ಒಪ್ಪಿಗೆ ನೀಡಿದೆ.

## ❖ ಸರಕು, ಪ್ರಯಾಣ ಸೇವೆ: ಕೆಐಎ ಪ್ರಗತಿ

- ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವು (ಕೆಐಎ) 2025-26ರಲ್ಲಿ 44.47 ದಶಲಕ್ಷ ಪ್ರಯಾಣಿಕರ ಸೇವೆ, 5.32 ಲಕ್ಷ ಟನ್ ಸರಕು ಸರಬರಾಜು ಮೂಲಕ ಎರಡೂ ವಿಭಾಗದಲ್ಲಿ ಪ್ರಗತಿ ಸಾಧಿಸಿದೆ.

Dr. Rajkumar IAS Academy

- ಅಂತರರಾಷ್ಟ್ರೀಯ ಪ್ರಯಾಣಿಕರ ಸಂಚಾರ ಶೇ 23.9ರಷ್ಟು ಏರಿಕೆಯಾಗಿ 7.23 ದಶಲಕ್ಷ ತಲುಪಿದರೆ, ದೇಶೀಯ ಸಂಚಾರ ಶೇ 3.3ರಷ್ಟು, ಏರಿಕೆಯೊಂದಿಗೆ 37.24 ದಶಲಕ್ಷ ತಲುಪಿದೆ.
- ಪ್ರಯಾಣಿಕರ ಸಂಚಾರ ಹೆಚ್ಚಳಕ್ಕೆ ಅನುಗುಣವಾಗಿ ವಿಮಾನ ನಿಲ್ದಾಣದ ಕಾರ್ಯಾಚರಣೆ ಸಾಮರ್ಥ್ಯ ವಿಸ್ತರಿಸಿದ್ದು, 2,80,800 ವಿಮಾನ ಸಂಚಾರಗಳು ದಾಖಲಾಗಿವೆ. ದಿನಕ್ಕೆ ಸರಾಸರಿ 769 ವಿಮಾನ ಸಂಚಾರ ದಾಖಲಾಗಿದ್ದು. ಒಂದೇ ದಿನದಲ್ಲಿ ಗರಿಷ್ಠ 837 ವಿಮಾನಗಳ ಸಂಚಾರ ಸೇರಿದೆ. ಒಂದೇ ದಿನ 1,39,111 ಪ್ರಯಾಣಿಕರು ಪ್ರಯಾಣಿಸಿದ್ದಾರೆ.
- 5,32,000 ಮೆಟ್ರಿಕ್ ಟನ್ ಸರಕನ್ನು ಸಾಗಣೆ ಮಾಡಲಾಗಿದೆ. 15 ಸರಕು ವಿಮಾನ ಸಂಸ್ಥೆಗಳು 38 ನಗರಗಳಿಗೆ ಸೇವೆ ನೀಡುತ್ತಿವೆ.
- ಸತತ ಐದನೇ ವರ್ಷವೂ ಭಾರತದ ಪ್ರಮುಖ ರಫ್ತು ಕೇಂದ್ರವಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಈ ವರ್ಷದಲ್ಲಿ 60 ದಶಲಕ್ಷ ಗುಲಾಬಿ ಹೂ ಸಾಗಣೆ ಮಾಡಿದ್ದು, ಮಾವಿನ ಹಣ್ಣುಗಳ ರಫ್ತು, ಶೇ 12ರಷ್ಟು ಏರಿಕೆಯಾಗಿ 5 ವರ್ಷಗಳ ಗರಿಷ್ಠ ಮಟ್ಟ ತಲುಪಿದೆ ಕೊತ್ತಂಬರಿ ಸೊಪ್ಪಿನ ಸಾಗಣೆಯಲ್ಲಿ ಶೇ 13ರಷ್ಟು ಏರಿಕೆಯಾಗಿದೆ.

## ❖ ರಕ್ಷಣಾ ಸಹಕಾರ ವೃದ್ಧಿಗೆ ಭಾರತ-ಇಟಲಿ ನಿರ್ಧಾರ

- ಮಿಲಿಟರಿ ಹಾರ್ಡ್‌ವೇರ್ ಮತ್ತು ಭಾರತದ ಕರಾವಳಿ ರಕ್ಷಣಾ ಪಡೆಗೆ ಅಗತ್ಯವಿರುವ ತಂತ್ರಜ್ಞಾನದ ಜಂಟಿ ಅಭಿವೃದ್ಧಿಗಾಗಿ ಚೌಕಟ್ಟು ರೂಪಿಸಲು ಭಾರತ ಮತ್ತು ಇಟಲಿ ಗುರುವಾರ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ನಿರ್ಧರಿಸಿವೆ.
- ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಇಟಲಿಯ ರಕ್ಷಣಾ ಸಚಿವ ಗ್ಯೆಡೊ ಕ್ರೊಸೆಟ್ಟೊ ಅವರು, ಸಭೆಯ ಬಳಿಕ ಉಭಯ ದೇಶಗಳ ಶಶಸ್ತ್ರ ಪಡೆಗಳಿಗೆ ಅಗತ್ಯವಿರುವ ರಕ್ಷಣಾ ತಂತ್ರಜ್ಞಾನದ ಯೋಜನೆ 2026-27 ಅನಾವರಣಗೊಳಿಸಿದರು.
- 'ಪಶ್ಚಿಮ ಏಷ್ಯಾ ಸಂಘರ್ಷವೂ ಸೇರಿದಂತೆ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಲವು ಸಮಸ್ಯೆಗಳ ಬಗ್ಗೆ ನಾವು ಚರ್ಚೆ ನಡೆಸಿದ್ದೇವೆ. ಆತ್ಮನಿರ್ಭರ ಭಾರತ ಮತ್ತು ಇಟಲಿಯ ರಕ್ಷಣಾ ಸಹಕಾರ ಯೋಜನೆಯಡಿ ಎರಡೂ ದೇಶಗಳಿಗೆ ಸಹಕಾರಿಯಾಗಬಲ್ಲ ಮಿಲಿಟರಿ ಸಹಕಾರ ಬಗ್ಗೆ, ಇಂಡೊ-ಪೆಸಿಫಿಕ್ ವಲಯದಲ್ಲಿ ಸಹಕಾರ ವಿಸ್ತರಣೆ ಬಗ್ಗೆ ಮಾತುಕತೆ ನಡೆಯಿತು' ಎಂದು ರಾಜನಾಥ್ ಸಿಂಗ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.
- ರಕ್ಷಣಾ ಸಚಿವರ ಸಭೆಯ ಸಂದರ್ಭದಲ್ಲೇ, ಭಾರತೀಯ ಕರಾವಳಿ ರಕ್ಷಣಾ ಪಡೆಯು, ಇಟಲಿಯ ಹಡಗು ನಿರ್ಮಾಣ ಕಂಪನಿ ಫಿನ್ ಕಾಂಟೀರಿ ಜತೆಗೆ ಅತ್ಯಾಧುನಿಕ ವಿನ್ಯಾಸ, ಸಂಯೋಜಿತ ಅಗ್ನಿಶಾಮಕ ವ್ಯವಸ್ಥೆ ಮತ್ತು ಹೈಬ್ರಿಡ್ ಪ್ರೊಪಲ್ಷನ್ ಬಗ್ಗೆ ಚರ್ಚೆ ನಡೆಸಿತು ಎಂದು ಮೂಲಗಳು ತಿಳಿಸಿವೆ.

## ❖ ಗ್ರೇಟ್ ನಿಕೋಬಾರ್ ಯೋಜನೆ: ಅಭಿವೃದ್ಧಿಯೇ,'ಅಪರಾಧ'ವೇ?

- ಅಂಡಮಾನ್ ಮತ್ತು ನಿಕೋಬಾರ್, ಬಂಗಾಳ ಕೊಲ್ಲಿಯ ಪೂರ್ವಕ್ಕೆ ಮತ್ತು ಅಂಡಮಾನ್ ಸಮುದ್ರದ ಪಶ್ಚಿಮಕ್ಕೆ ಚದುರಿದಂತೆ ಇರುವ ದ್ವೀಪಗಳ ಗುಚ್ಛ ಇಲ್ಲಿ ದ್ವೀಪಗಳ ಎರಡು ಗುಂಪುಗಳಿವೆ. ಅಂಡಮಾನ್ ದ್ವೀಪಗಳು ಮತ್ತು ನಿಕೋಬಾರ್ ದ್ವೀಪಗಳು ಅಂಡಮಾನ್ ಉತ್ತರದಲ್ಲಿದ್ದರೆ, ನಿಕೋಬಾರ್ ದಕ್ಷಿಣದಲ್ಲಿದೆ. ನಿಕೋಬಾರ್ ದ್ವೀಪಗಳಲ್ಲಿ ಗ್ರೇಟ್ ನಿಕೋಬಾರ್ ಒಂದು.
- ಭಾರತದ ದಕ್ಷಿಣದ ತುತ್ತತುದಿ ಇಂದಿರಾ ಪಾಯಿಂಟ್ ಇರುವುದು ಗ್ರೇಟ್ ನಿಕೋಬಾರ್ ದ್ವೀಪದಲ್ಲಿ. ಇದು 910 ಚದರ ಕಿ.ಮೀನಷ್ಟು ವಿಸ್ತೀರ್ಣವಿದೆ. ಅಪರೂಪದ ಪರಿಸರ, ಜೀವವೈವಿಧ್ಯಕ್ಕೆ ಹೆಸರಾದ ಇದು ಶೋಂಪೆನ್ ಮತ್ತು ನಿಕೋಬಾರಿ ಬುಡಕಟ್ಟು ಸಮುದಾಯಗಳು ನೆಲಸಿರುವ ಸ್ಥಳವೂ ಹೌದು.
- ಕೇಂದ್ರ ಸರ್ಕಾರವು ನಿಕೋಬಾರ್ ದ್ವೀಪಗಳ ದಕ್ಷಿಣದ ತುತ್ತತುದಿಯನ್ನು ಕೇಂದ್ರವಾಗಿಟ್ಟುಕೊಂಡು ಬೃಹತ್ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಂಡಿದೆ ಅದೇ ಗ್ರೇಟ್ ನಿಕೋಬಾರ್ ಅಭಿವೃದ್ಧಿ ಯೋಜನೆ. ಇದರ ಅನುಷ್ಠಾನಕ್ಕೆ ₹81 ಸಾವಿರ ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸಮಗ್ರ ಅಭಿವೃದ್ಧಿ ನಿಗಮ

Dr. Rajkumar IAS/KAS Academy

ನಿಯಮಿತವು (ಎಎನ್ಐಐಡಿಸಿಬ) ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ ನೀತಿ ಆಯೋಗವು ಈ ಯೋಜನೆಯ ರೂಪುರೇಷೆಯನ್ನು ಸಿದ್ಧಪಡಿಸಿದೆ.

## ಏನಿದು ಯೋಜನೆ?

- ನಿಕೋಬಾರ್ ದ್ವೀಪದ ದಕ್ಷಿಣ ಭಾಗದಲ್ಲಿ ಅಂತರರಾಷ್ಟ್ರೀಯ ಕಂಟೇನರ್ ಮರುಹಂಚಿಕೆ (ಟ್ರಾನ್ಸ್ಶಿಪ್ಮೆಂಟ್) ಟರ್ಮಿನಲ್ (ಐಸಿಟಿಟಿ), ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, 450 ಮೆಗಾ ವಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರ ಮತ್ತು ಒಂದು ಟೌನ್ಶಿಪ್ ನಿರ್ಮಾಣ ಮಾಡುವುದು ಯೋಜನೆಯ ತಿರುಳು.
- ಗಲಾಥಿಯಾ ಕೊಲ್ಲಿಯಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಬಂದರು (ಐಸಿಸಿಟಿ) ನಿರ್ಮಾಣ ಮಾಡುವುದು ಯೋಜನೆಯ ಪ್ರಮುಖ ಉದ್ದೇಶ: 2020ರ ಹೊತ್ತಿಗೆ ಬಂದರಿನ ಮೊದಲ ಹಂತದ ಕೆಲಸ ಪೂರ್ಣಗೊಂಡು ಕಾರ್ಯಾರಂಭ ಆಗುವಂತೆ ಮಾಡುವುದು ಕೇಂದ್ರದ ಯೋಚನೆ: ಬಂದರು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸಿದ ನಂತರ ವಾರ್ಷಿಕವಾಗಿ 1.6 ಕೋಟಿ ಕಂಟೇನರ್ಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಲಿದೆ. ಮೊದಲ ಹಂತದ ಕಾಮಗಾರಿ ಮುಕ್ತಾಯವಾದಾಗ ವಾರ್ಷಿಕವಾಗಿ 40 ಲಕ್ಷ ಕಂಟೇನರ್ಗಳನ್ನು ನಿರ್ವಹಿಸಲಿದೆ ಎಂದು ಹೇಳಲಾಗುತ್ತಿದೆ.
- ಗಲಾಥಿಯಾ ಕೊಲ್ಲಿಯಿಂದ ಈಶಾನ್ಯಕ್ಕೆ ಅಂದಾಜು 4,000 ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುವ ವಿಮಾನ ನಿಲ್ದಾಣ (ನಾಗರಿಕ ಮತ್ತು ಸೇನೆ ಉದ್ದೇಶದ) ನಿರ್ಮಾಣ ಮಾಡುವುದು ಈ ಯೋಜನೆಯಲ್ಲಿನ ಮತ್ತೊಂದು ಅಂಶ ಕ್ಯಾಂಪ್ ಬೆಲ್ ಕೊಲ್ಲಿಗೆ ಹೊಂದಿಕೊಂಡಂತೆ ಎಲ್ಲ ಮೂಲಸೌಕರ್ಯಗಳನ್ನೊಳಗೊಂಡ ಟೌನ್ ಶಿಪ್ ಅನ್ನು ಅಭಿವೃದ್ಧಿ ಪಡಿಸುವುದು ಮತ್ತೊಂದು ಉದ್ದೇಶವಾದರೆ, ಈ ಮೂಲಸೌಕರ್ಯಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ 450 ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರದ (ಅನಿಲ ಮತ್ತು ಸೌರ) ಅಭಿವೃದ್ಧಿ ಯೋಜನೆಯ ಇನ್ನೊಂದು ಭಾಗ.

## ಪರಿಸರ, ಜೀವವೈವಿಧ್ಯಕ್ಕೆ ಧಕ್ಕೆಯ ಆತಂಕ

- ಯೋಜನೆ ಘೋಷಣೆ ಆದಾಗಿನಿಂದಲೂ ಅನೇಕ ಪರಿಸರವಾದಿಗಳು, ಸಾಮಾಜಿಕ ಕಾರ್ಯಕರ್ತರು, ಬುಡಕಟ್ಟು ಮುಖಂಡರು ಯೋಜನೆಯನ್ನು ವಿರೋಧಿಸುತ್ತಲೇ ಬರುತ್ತಿದ್ದಾರೆ. ಯೋಜನೆಗಾಗಿ 130 ಚದರ ಕಿ.ಮೀ. ದೂರದ ದಟ್ಟ ಕಾಡಿನಲ್ಲಿ ಸುಮಾರು 10 ಲಕ್ಷ ಮರಗಳ ಹನನವಾಗಲಿದೆ. ಇದು ದೇಶದ ಪರಿಸರ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎನ್ನುವುದು ಯೋಜನೆಯನ್ನು ವಿರೋಧಿಸುವವರ ಪ್ರಮುಖ ಆಕ್ಷೇಪಣೆಯಾಗಿದೆ.
- ಅವರ ಪ್ರಕಾರ, ಇದು ಅತ್ಯಂತ ಸಮೃದ್ಧವಾದ, ಅಪರೂಪದ ಸಸ್ಯ ಮತ್ತು ಜೀವಸಂಪತ್ತು ನೆಲೆಗೊಂಡಿರುವ ತಾಣ. ಸಮುದ್ರ ಆಮೆಯ ವಿಶೇಷ ಪ್ರಭೇದಕ್ಕೆ ದ್ವೀಪವು ಪ್ರಖ್ಯಾತಿ ಪಡೆದಿದೆ. ಪಕ್ಷಿಗಳು, ಪ್ರಾಣಿಗಳು, ಹಲ್ಲಿಗಳು, ಚಿಟ್ಟೆಗಳು ಸೇರಿದಂತೆ 2500 ಜೀವಿಗಳು ಇಲ್ಲಿದ್ದು, ಈ ಪೈಕಿ 400 ಇಲ್ಲಿ ಮಾತ್ರವೇ ಕಂಡುಬರುವಂಥವು. ಇಂಥ ಅನೇಕ ವಿಶಿಷ್ಟ ಜಲಚರಗಳು, ಗಿಡಮರಗಳು ಇಲ್ಲಿವೆ. ಹವಳದ ದಿಬ್ಬಗಳೂ ಇವೆ. ಯೋಜನೆಯಿಂದ ಅವುಗಳ ಅಸ್ತಿತ್ವಕ್ಕೆ ಧಕ್ಕೆಯಾಗಲಿದೆ.
- ಪ್ರಸ್ತುತ ದ್ವೀಪದಲ್ಲಿ 8 ಸಾವಿರ ಜನಸಂಖ್ಯೆ ಇದ್ದು. ಯೋಜನೆ ಜಾರಿಯಾದ ನಂತರ ಈ ಸಂಖ್ಯೆಯು 3.5 ಲಕ್ಷಕ್ಕೆ ಏರಲಿದೆ. ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗಲಿವೆ. ಇದರಿಂದ ದ್ವೀಪದ ಸೂಕ್ಷ್ಮ ಪರಿಸರ ವ್ಯವಸ್ಥೆ ಮತ್ತು ಜೀವಿ ವ್ಯವಸ್ಥೆಗೆ ಹಾನಿ ಉಂಟಾಗಲಿದೆ. 2004ರಲ್ಲಿ ಇಲ್ಲಿ ಭೂಕಂಪ ಮತ್ತು ಸುನಾಮಿ ಸಂಭವಿಸಿ. 4 ಮೀಟರ್ಗಿಂತ ಹೆಚ್ಚಿನ ಭೂಪ್ರದೇಶ ಕೊಚ್ಚಿಕೊಂಡು ಹೋಗಿತ್ತು.
- ಭಾರತದಲ್ಲಿ ನಾಶದ ಹಾದಿಯಲ್ಲಿರುವ ಉಷ್ಣವಲಯದ ಮಳೆಕಾಡುಗಳಲ್ಲಿ ನಿಕೋಬಾರ್ ದ್ವೀಪವೂ ಒಂದಾಗಿದೆ. ಅಪರೂಪದ ಜೀವವೈವಿಧ್ಯ ಮಾತ್ರವಲ್ಲದೇ, ಶೋಂಪನ್ ಮತ್ತು ನಿಕೋಬಾರಿ ಎಂಬ ಎರಡು ಸೂಕ್ಷ್ಮ ಮತ್ತು ಆಧುನಿಕತೆಗೆ ಒಡ್ಡಿಕೊಳ್ಳದ ಬುಡಕಟ್ಟು ಸಮುದಾಯಗಳು ಇಲ್ಲಿವೆ. ಅಲೆಮಾರಿಗಳಾದ ಶೋಂಪೆನ್ ಬುಡಕಟ್ಟಿನಲ್ಲಿ ಕೇವಲ 237 ಜನರಿದ್ದರೆ, ಒಂದೆಡೆ ನೆಲಸಿರುವ ನಿಕೋಬಾರಿ ಬುಡಕಟ್ಟಿನಲ್ಲಿ 1,094 ಮಂದಿ ಅಷ್ಟೇ ಇದ್ದಾರೆ ಈ ಅತಿ ಸೂಕ್ಷ್ಮ ಬುಡಕಟ್ಟುಗಳ ಅಸ್ತಿತ್ವಕ್ಕೆ ಯೋಜನೆಯು ಮಾರಕವಾಗುತ್ತದೆ.

- ಯೋಜನೆಗೆ ಅನುಮತಿ ಪಡೆಯುವ ವಿಚಾರದಲ್ಲಿ ಭಾರತದ ವನ್ಯಜೀವಿ ಸಂಘ (ಡಬ್ಲ್ಯು ಐಐ) ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್ ಜಿಟಿ) ನಿಯಮಗಳನ್ನು ಉಲ್ಲಂಘಿಸಿವೆ ಎನ್ನುವುದು ಬಾಂಬೆ ಐಐಟಿಯ ಪ್ರಾಧ್ಯಾಪಕ ಮತ್ತು ನಿಕೋಬಾರ್ ದ್ವೀಪದ ಬಗ್ಗೆ 30 ವರ್ಷ ಅಧ್ಯಯನ ಮಾಡಿರುವ ಪಂಕಜ್ ಶೇಖ್ಸಾರಿಯಾ ಅವರ ಆರೋಪ.
- ಲೇಖಕರು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ 70ಕ್ಕೂ ಅಧಿಕ ಮಂದಿ ಯೋಜನೆ ವಿರೋಧಿಸಿ ಪರಿಸರ ಸಚಿವಾಲಯಕ್ಕೆ ಪತ್ರ ಬರೆದಿದ್ದರು. 'ಯೋಜನೆ ಜಾರಿ ವಿಚಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಇಲ್ಲ. ಯೋಜನೆಯಿಂದ ತೊಂದರೆಗೊಳಗಾಗುವ ಜನರ ಜತೆ ಚರ್ಚೆ ನಡೆಸಿಲ್ಲ. ಅವರ ಅನುಮತಿ ಪಡೆದಿಲ್ಲ. ಯೋಜನೆಯಿಂದ ಸರ್ವನಾಶವೇ ಘಟಿಸಲಿದೆ' ಎನ್ನುವುದು ಅವರ ಆರೋಪ
- ಗ್ರೇಟ್ ನಿಕೋಬಾರ್ ಯೋಜನೆಗಾಗಿ ದ್ವೀಪದ ಶೇ 15ರಷ್ಟು ಅರಣ್ಯ ಪ್ರದೇಶವನ್ನು ಬಳಸಿಕೊಳ್ಳಲಾಗುತ್ತಿದೆ ಅಲ್ಲಿನ ಲಕ್ಷಾಂತರ ಮರಗಳನ್ನು ಕಡಿಯಲಾಗುತ್ತಿದೆ ಆದರೆ, ಸರ್ಕಾರ ಕೇವಲ ಶೇ 1.82ರಷ್ಟು ಅರಣ್ಯ ಪ್ರದೇಶ ಎಂದು ಪ್ರತಿಪಾದಿಸುತ್ತಾ, ತಪ್ಪುದಾರಿಗೆಳೆಯುತ್ತಿದೆ ಎಂದು ಪತ್ರದಲ್ಲಿ
- ಉಲ್ಲೇಖಿಸಿದ್ದರು.
- ಯೋಜನೆಯು ಶೋಂಪನ್ ಬುಡಕಟ್ಟಿಗೆ ವಿಧಿಸಲಾಗುತ್ತಿರುವ ಮರಣದಂಡನೆಯಾಗಿದ್ದು, ಇದು ಜನಾಂಗೀಯ ಹತ್ಯೆಯಂಥ ಅಂತರರಾಷ್ಟ್ರೀಯ ಅಪರಾಧಕ್ಕೆ ಸಮನಾಗಿದೆ ಎಂದು ಸರ್ವೈವಲ್ ಇಂಟರ್ನ್ಯಾಷನಲ್ ಸಂಸ್ಥೆಯು ವಿಶ್ವಸಂಸ್ಥೆಗೆ ಸಲ್ಲಿಸಿರುವ ಯೋಜನೆ ಕುರಿತ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಿದೆ.

**ಕೇಂದ್ರ ಸರ್ಕಾರ ಹೇಳುವುದೇನು?**

- ದೇಶದ ಆರ್ಥಿಕ ಮತ್ತು ಭದ್ರತಾ ಹಿತದೃಷ್ಟಿಯಿಂದ ಮಹತ್ವದ ಯೋಜನೆ
- ಪರಿಸರ, ಸಾಮಾಜಿಕ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ
- ಅಂಡಮಾನ್ ಸಮುದ್ರ ಮತ್ತು ಆಗ್ನೇಯ ಏಷ್ಯಾದಲ್ಲಿ ಭಾರತದ ಉಪಸ್ಥಿತಿ ಹೆಚ್ಚಲಿದೆ
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಆರ್ಥಿಕ ಕೇಂದ್ರಗಳಾಗಿ ಬದಲಾಗಲಿವೆ. ಜಾಗತಿಕ ಪ್ರಮುಖ ಸರಕು ನಿರ್ವಹಣೆ ಕೇಂದ್ರವಾಗಲಿದೆ. ಜಾಗತಿಕ ಪ್ರವಾಸಿ ತಾಣವಾಗಿ ಪರಿವರ್ತನೆಯಾಗಲಿದೆ.
- ಅಂಡಮಾನ್ ಮತ್ತು ನಿಕೋಬಾರ್‌ನ ಜೀವ ವೈವಿಧ್ಯ ಮತ್ತು ಸ್ಥಳೀಯ ಬುಡಕಟ್ಟು ಸಮುದಾಯಗಳಿಗೆ ತೊಂದರೆಯಾಗದು

**ಗೃಹ ಸಚಿವಾಲಯದ ಉಸ್ತುವಾರಿ**

ಈ ಯೋಜನೆಯನ್ನು ಗೃಹ ಸಚಿವಾಲಯದ ಅಡಿಯಲ್ಲಿ ಜಾರಿ ಮಾಡಲಾಗುತ್ತಿದೆ. ಇದರಿಂದ ಯೋಜನೆ ಬಗ್ಗೆ ಮಾಹಿತಿ ಪಡೆಯುವುದು, ದ್ವೀಪ ಸಮೂಹಕ್ಕೆ ಭೇಟಿ ನೀಡುವುದು ಕಷ್ಟಕರವಾಗಿದೆ. ಇದೊಂದು ವಾಣಿಜ್ಯ ಯೋಜನೆಯಾಗಿದೆ. ಆದರೆ, ದೇಶದ ಭದ್ರತೆಯ ನೆಪವನ್ನು ಮುಂದು ಮಾಡಲಾಗುತ್ತಿದೆ. ಇಲ್ಲಿ ರಕ್ಷಣೆಯ ಉದ್ದೇಶಕ್ಕೆ ಬಳಕೆಯಾಗುವುದು ವಿಮಾನ ನಿಲ್ದಾಣ ಮಾತ್ರವೇ. ಅದಕ್ಕೆ ಒಟ್ಟು ಯೋಜನಾ ಪ್ರದೇಶದಲ್ಲಿ ಶೇ 5ರಷ್ಟು ಭೂಪ್ರದೇಶವಷ್ಟೇ ಬಳಕೆಯಾಗುತ್ತಿದೆ ಎನ್ನುವುದು ಪರಿಸರವಾದಿಗಳ ವಾದ.

## ❖ 3 ಕಡೆ ಸುಸ್ಥಿರ ದತ್ತಾಂಶ ಪಾರ್ಕ್ ಸ್ಥಾಪನೆ

- ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಸುಸ್ಥಿರ ದತ್ತಾಂಶ ಕೇಂದ್ರಗಳು ಅಗತ್ಯವಿದ್ದು, ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ 'ದತ್ತಾಂಶ' ಪಾರ್ಕ್ ಸ್ಥಾಪಿಸಲು ಸಚಿವರ ಸಭೆ ತೀರ್ಮಾನಿಸಿದೆ.
- ಗುರುವಾರ ನಡೆದ ಪ್ರಾಥಮಿಕ ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ಐ.ಟಿ-ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ಭಾಗವಹಿಸಿದ್ದರು.
- ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವಾಟ್ ಸಾಮರ್ಥ್ಯದ ಸುಸ್ಥಿರ ದತ್ತಾಂಶ ಪಾರ್ಕ್ ಸ್ಥಾಪಿಸಲಾಗುವುದು ಅಲ್ಲಿಗೆ ಪಾವಗಡದಿಂದ ಸೌರ ವಿದ್ಯುತ್ ನೇರವಾಗಿ ಪೂರೈಕೆಯಾಗಲಿದೆ. ಜೊತೆಗೆ, ಬೆಂಗಳೂರು ಜಲ ಮಂಡಳಿಯು ಎರಡು ಹಂತಗಳಲ್ಲಿ ಸಂಸ್ಕರಿಸಿದ 60 ಎಂಎಲ್ಡಿ ನೀರು ಪೂರೈಸಲಿದ್ದು,

Dr Rajkumar IAS Academy

ಈ ನೀರಿನ ಮೂರನೇ ಹಂತದ ಶುದ್ಧೀಕರಣವನ್ನು ಉದ್ಯಮಗಳಗೆ ಮಾಡಿಕೊಳ್ಳುತ್ತವೆ. ಈ ಮೂರೂ ಪಾರ್ಕ್‌ಗಳ ಸಾಮರ್ಥ್ಯ 1,000 ಮೆಗಾವಾಟ್ ಇರಲಿದೆ ಎಂದು ಮೂವರು ಸಚಿವರ ಜಂಟಿ ಹೇಳಿಕೆ ತಿಳಿಸಿದೆ.

- ಮಂಗಳೂರಿನಲ್ಲಿ ಕೂಡ ದತ್ತಾಂಶ ಪಾರ್ಕ್ ಸ್ಥಾಪನೆಗೆ ಭೂಮಿಯು ಲಭ್ಯವಿದೆ. ಅಲ್ಲಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಗೆ ಸೇರಿದ 350 ಎಕರೆ ಇದೆ. ಮೈಸೂರಿನಲ್ಲಿ ಈ ಉದ್ದೇಶಕ್ಕೆ ಸೂಕ್ತ ಜಾಗ ಗುರುತಿಸಲಾಗುವುದು ಎಂದು ವಿವರಿಸಿದೆ.
- ಈ ಪಾರ್ಕ್‌ಗಳಲ್ಲಿ ಯಾರೇ ಬಂದು ದತ್ತಾಂಶ ಕೇಂದ್ರ ಸ್ಥಾಪನೆಗೆ ಹೂಡಿಕೆ ಮಾಡಿದರೆ, ವಿದ್ಯುತ್ ಮತ್ತು ನೀರು ನೀಡಲಾಗುವುದು ಅದಕ್ಕೆ ಪೂರಕವಾದ ಸಿದ್ಧತೆ ಮಾಡಿಕೊಳ್ಳಲು ಹಾಗೂ ಹೂಡಿಕೆದಾರರ ಜತೆಗೂ ಸಭೆ ನಡೆಸಲು ಮೂವರು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.
- ಜಲಸಂಪನ್ಮೂಲ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೂ ಇರುವ ಸಚಿವರ ತಂಡ ಮತ್ತು ಉನ್ನತ ಅಧಿಕಾರಿಗಳ ತಂಡವನ್ನು ಮುಂದಿನ ಹಂತದಲ್ಲಿ ರಚಿಸಲು ಸಭೆ ನಿರ್ಧರಿಸಿದೆ.
- ಸಭೆಯಲ್ಲಿ ಇಂಧನ ಮತ್ತು ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ್ ಗುಪ್ತ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಮಕುಮಾರ್, ಐಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ಕೆಎಸ್ಐಐಡಿಸಿ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬು ಗೋಯಲ್ ಕೆಐಎಡಿಬಿ ವ್ಯವಸ್ಥಾಪಕ ನಿರ್ದೇಶಕ ಡಾ. ಮಹೇಶ್ ಬೆಂಗಳೂರು ಜಲ ಮಂಡಳಿಯ ಅಧ್ಯಕ್ಷ ರಾಮ ಪ್ರಸಾತ್ ಮನೋಹರ್ ಐಟಿ ನಿರ್ದೇಶಕ ರಾಹುಲ್ ಸಂಕನೂರು ಇದ್ದರು.

### ❖ ಕಚ್ಚಾ ತೈಲದ ಬೆಲೆ 4 ವರ್ಷದ ಗರಿಷ್ಠ

- ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಗುರುವಾರ ನಾಲ್ಕು ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿತು. ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಮತ್ತೆ ತೀವ್ರಗೊಳ್ಳಬಹುದು ಎಂಬ ಆಂತಕದ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯು ಜಿಗಿದಿದೆ ಎಂದು ತಜ್ಞರು ಹೇಳಿದ್ದಾರೆ.
- ಬ್ರೆಂಟ್ ಕಚ್ಚಾ ತೈಲದ ಬೆಲೆಯು ಗುರುವಾರದ ವಹಿವಾಟಿನಲ್ಲಿ ಬ್ಯಾರಲ್ ಒಂದಕ್ಕೆ 126 ಡಾಲರ್ ಮಟ್ಟವನ್ನು ತಲುಪಿತ್ತು. ನಂತರ ಅದು ತುಸು ಕಡಿಮೆ ಆಯಿತು. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಈ ಮಟ್ಟವನ್ನು ಕಡೆಯ ಬಾರಿ ತಲುಪಿದ್ದು 2022ರ ಮಾರ್ಚ್ 8ರಂದು.
- ಇರಾನ್ ಬಂದರುಗಳ ಮೇಲಿನ ದಿಗ್ಬಂಧನವು ತಿಂಗಳುಗಳವರೆಗೆ ಮುಂದುವರಿಯಬಹುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿರುವುದು ವಿವಿಧೆಡೆ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿದೆ. ಇರಾನ್ ಗುರಿಯಾಗಿಸಿ ಹೊಸದಾಗಿ ಮಿಲಿಟರಿ ಕಾರ್ಯಾಚರಣೆ ನಡೆಸುವ ಬಗ್ಗೆ ಟ್ರಂಪ್ ಅವರಿಗೆ ಮಾಹಿತಿ ಒದಗಿಸಲಾಗುತ್ತದೆ ಎಂಬ ವರದಿಗಳೂ ಇವೆ.
- 'ಶಾಂತಿ ಸ್ಥಾಪನೆ ಉದ್ದೇಶದ ಮಾತುಕತೆಗಳು ನಡೆಯುವ ಯಾವುದೇ ಸೂಚನೆ ಕಾಣುತ್ತಿಲ್ಲ, ಸಂಘರ್ಷವು ತೀವ್ರ ಆಗಬಹುದು ಎಂಬ ಭೀತಿ ಹೆಚ್ಚಾಗಿದೆ ಹೀಗಾಗಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಕಂಡಿದೆ' ಎಂದು ಡಾಯಿಚ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಜಿಮ್ ರೀಡ್ ಹೇಳಿದ್ದಾರೆ.
- ಯುಎಇ ದೇಶವು ಪೆಟ್ರೋಲಿಯಂ ರಫ್ತುದಾರ ದೇಶಗಳ ಸಂಘಟನೆ 'ಒಪೆಕ್'ನಿಂದ ಹೊರಬರುವ ತೀರ್ಮಾನ ತೆಗೆದುಕೊಂಡಿರುವುದು ಕೂಡ ತೈಲ ಬೆಲೆ ಏರಿಕೆಗೆ ಒಂದು ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

### ❖ 'ವಂದೇ ಭಾರತ್'ಗೆ ಹಸಿರು ನಿಶಾನೆ

- ಕಾಶ್ಮೀರದ ರಿಯಾಸಿ ಜಿಲ್ಲೆಯ ಕಟ್ರಾ ಬಳಿ ಚೆನಾಬ್ ನದಿಗೆ ನಿರ್ಮಿಸಿರುವ, ವಿಶ್ವದ ಅತ್ಯಂತ ಎತ್ತರದ ರೈಲು ಸೇತುವೆಯನ್ನು ಗುರುವಾರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಮೊದಲ ಬಾರಿಗೆ ದಾಟಿತು.
- ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಜಮ್ಮು ಮತ್ತು ಶ್ರೀನಗರ ನಡುವಿನ 20 ಬೋಗಿಗಳ ವಂದೇ ಭಾರತ್ ಗೆ ಹಸಿರು ನಿಶಾನೆ ತೋರಿದರು. ಈ ಮಾರ್ಗವು ಮೇ 2ರಿಂದ ಸಾರ್ವಜನಿಕ ಬಳಕೆಗೆ ಮುಕ್ತಗೊಳ್ಳಲಿದೆ.

## ❖ ಬಾಲಕಿಯರ ಗರ್ಭಧಾರಣೆ; ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ: 'ಅತ್ಯಾಚಾರ ಸಂತ್ರಸ್ತರ ಗರ್ಭಪಾತ: ಕಾನೂನು ತಿದ್ದುಪಡಿ ಬೇಕು'

- 'ಬಾಲಕಿಗೆ ಬಲವಂತವಾಗಿ ಗರ್ಭ ಧರಿಸುವಂತೆ ಒತ್ತಾಯಿಸಲು ಸಾಧ್ಯವಿಲ್ಲ' ಎಂದು ಹೇಳಿರುವ ಸುಪ್ರೀಂ ಕೋರ್ಟ್ ಅತ್ಯಾಚಾರ ಸಂತ್ರಸ್ತೆಯರಿಗೆ 20 ವಾರಗಳ ಬಳಿಕವೂ ಗರ್ಭಪಾತಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕಾನೂನು ತಿದ್ದುಪಡಿ ಮಾಡಬೇಕು' ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.
- 15 ವರ್ಷದ ಬಾಲಕಿಯ 30 ವಾರಗಳ ಗರ್ಭಧಾರಣೆಗೆ ಸುಪ್ರೀಂ ಕೋರ್ಟ್ ಈ ಹಿಂದೆ ಅವಕಾಶ ನೀಡಿದ್ದ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಸಲ್ಲಿಸಿದ ಮನವಿಗೆ ಆಕ್ಷೇಪ ವ್ಯಕ್ತಪಡಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್. ನ್ಯಾಯಮೂರ್ತಿ ಜಾಯ್ಮಾಲ್ಯ ಬಾಗ್ಚಿ ನೇತೃತ್ವದ ನ್ಯಾಯಪೀಠ, ಮಕ್ಕಳು ಸೇರಿದಂತೆ ಅತ್ಯಾಚಾರ ಸಂತ್ರಸ್ತರ ದೂರಗಾಮಿ ಪರಿಣಾಮ ಗಳನ್ನು ಗಮನದಲ್ಲಿರಿಸಿಕೊಂಡು ಈ ನಿರ್ದೇಶನ ನೀಡಿದೆ.
- 'ಅತ್ಯಾಚಾರ ಸೇರಿದಂತೆ ಇತರೆ ಕಾರಣಗಳಿಂದ ಗರ್ಭಧಾರಣೆಯಾದರೆ 20 ವಾರಗಳ ನಂತರವೂ ಗರ್ಭಪಾತಕ್ಕೆ ಅವಕಾಶ ಮಾಡಿಕೊಡುವಂತೆ ಕಾನೂನಿನಲ್ಲಿ ತಿದ್ದುಪಡಿ ತರಬೇಕು' ಎಂದು ತಿಳಿಸಿದೆ.
- 'ಒಂದೊಮ್ಮೆ ಅತ್ಯಾಚಾರಕ್ಕೊಳ ಗಾದ ಬಾಲಕಿ ಗರ್ಭಪಾತಕ್ಕೆ ಅವಕಾಶ ನೀಡದಿದ್ದರೆ ಜೀವನಪೂರ್ತಿ ಆಘಾತ ಎದುರಿಸಬೇಕಾಗುತ್ತದೆ ಗರ್ಭಪಾತದ ವೇಳೆ ತಾಯಿಯು ಶಾಶ್ವತ ಅಂಗವಿಕಲತೆಗೆ ಒಳಗಾಗುವ ಸಾಧ್ಯತೆ ಇರದಿದ್ದರೆ ಗರ್ಭಪಾತ ಮಾಡಬಹುದು ಮೇ 4ರೊಳಗೆ ಗರ್ಭಪಾತ ಮಾಡದೇ ಇದ್ದರೆ ನ್ಯಾಯಾಂಗ ನಿಂದನೆ ಎಂದೇ ಪರಿಗಣಿಸಬೇಕಾಗುತ್ತದೆ ಎಂದು ಪೀಠ ಎಚ್ಚರಿಸಿದೆ
- 'ಇದು ಮರುಪರಿಶೀಲನಾ ಅರ್ಜಿಯಾಗಿದೆ ಬಲವಂತವಾಗಿ ಗರ್ಭ ಧರಿಸುವಂತೆ ಹೇಳಲು ಸಾಧ್ಯವಿಲ್ಲ ಆಕೆ ಬಾಲಕಿ ಓದುತ್ತಿದ್ದಾಳೆ ನಾವು ಆಕೆಯನ್ನು ತಾಯಿ ಮಾಡಲು ಹೊರಟಿದ್ದೇವೆ ಆಕೆಯ ನೋವು ಅವಮಾನವನ್ನು ಊಹಿಸಿಕೊಳ್ಳಿ ಈ ವಿಚಾರದಲ್ಲಿ ಸಂತ್ರಸ್ತೆಯ ಪೋಷಕರಿಗೆ ಏಮ್ಸ್ ವೈದ್ಯರು ಸಲಹೆಗಳನ್ನು ನೀಡಬೇಕು' ಎಂದು ತಿಳಿಸಿದ
- 'ದತ್ತು ಪಡೆಯುವುದಕ್ಕಾಗಿಯೇ ಸಾಕಷ್ಟು ಮಕ್ಕಳಿವೆ ಬೀದಿಯಲ್ಲಿ ಬದುಕುತ್ತಿರುವ ಸಾಕಷ್ಟು ಅನಾಥ ಮಕ್ಕಳಿವೆ ಅವರ ಮೇಲೆ ಮಾಫಿಯಾಗಳಿಂದ ಕ್ರೌರ್ಯಗಳು ನಡೆಯುತ್ತಿವೆ ನಾವು ಅದನ್ನು ಗಮನಿಸಬೇಕು. ಇದು 15 ವರ್ಷದ ಬಾಲಕಿಗೆ ಬೇಡದ ಗರ್ಭಧಾರಣೆ ಯಾಗಿದೆ ಎಂದು ಪೀಠ ಹೇಳಿದೆ.
- ಈ ವೇಳೆ ಎಮ್ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಬಾಲಕಿಯ ಈಗಿನ ಸ್ಥಿತಿಯಲ್ಲಿ ಗರ್ಭಪಾತ ಮಾಡಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿಯೇ ಏಮ್ಸ್ ಮರುಪರಿಶೀಲನಾ ಅರ್ಜಿ ಸಲ್ಲಿಸಿದ ಬಾಲಕಿಯು 30 ವಾರ ಗರ್ಭಿಣಿಯಾಗಿರುವ ಕಾರಣ ಸರ್ಭಪಾತ ಮಾಡಿದರೆ ಮುಂದೆ ಆಕೆಗೆ ಜನಿಸುವ ಮಗು ವಿರೂಪಗೊಳ್ಳುವ ಸಾಧ್ಯತೆಯಿದೆ ಬಾಲಕಿಯು ಮುಂದೆ ಯುವತಿಯಾದ ನಂತರ ಜೀವನಪರ್ಯಂತ ಆರೋಗ್ಯದ ಸಮಸ್ಯೆ ಎದುರಿಸಬಹುದು ಮತ್ತೆ ಮಗು ಹರಲು ಅಸಾಧ್ಯವಾಗಲೂಬಹುದು ಎಂದು ಪೀಠದ ಗಮನಸೆಳೆದರು.
- ಈ ವಿಚಾರದಲ್ಲಿ ಬಾಲಕಿ ಹಾಗೂ ತಾಯಿಯ ಆಸ್ಪ ಸಮಾಲೋಚನೆ ನಡೆಸಲು ಅನುಮತಿ ನೀಡುವಂತೆ ನ್ಯಾಯಾಲಯವನ್ನು ಕೋರಿದರು ಇದಕ್ಕೆ ಸುಪ್ರೀಂ ಕೋರ್ಟ್ ಸಮ್ಮತಿಸಿದ್ದು, ಸೂಕ್ತ ನಿರ್ಧಾರ ಕೈಗೊಳ್ಳುವಂತೆ ತಿಳಿಸಿದೆ.

**-------------------------------------------ಶುಭವಂದನೆಗಳು---------------------------------------**